


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 Issue : 105 Friday 27-12-2024 E-mail : maruti.b.hosamani76@gmail.com Page: 4 Price : Rs. 1/-


## ಅಪಘಾತವಲ್ಲ, ಅಪಘಾತದ ಹೆಸರಿನಲ್ಲಿ ಕೊಲೆ ತಮ್ಮ ಸಿದ್ದಪ್ಪನ ಬಲವಾದ ಆರೋಪ





**ಸಿಹಿ ಕಹಿ ಸುದ್ದಿ**

**ಬಾಗಲಕೋಟೆ :** ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲೂಕಿನ ಭಗವತಿ ಗ್ರಾಮದ ಮಹಾಂತೇಶ ನನ್ನು ಕೊಲೆ ಮಾಡಬೇಕೆಂಬ ಮಹಾಂತೇಶ ಬರುವಂತ ಸಮಯದಲ್ಲಿ ದಿನಾಂಕ 14/2/2024 ರಂದು ಕಮತಿಗಿ ಬಸರಿಕಟ್ಟಿ ರಸ್ತೆಯಲ್ಲಿ ಮಹಾಂತೇಶನ ಸಮಯ ಮಧ್ಯಾಹ್ನ 12 ಗಂಟೆಗೆ 30 ನಿಮಿಷಕ್ಕೆ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಮಹಾಂತೇಶ ಕೆಳಗೆ ಬಿದ್ದ ನಂತರ ಕಾರು ತಲೆಯ ಮೇಲೆ ಏರಿಸಿ ಕೊಲೆ ಮಾಡಿ ಈ ಕೊಲೆ ನಮ್ಮ ಮೇಲೆ ಅನುಮಾನ ಬರಬಾರದು ಎಂದು ಅಪಘಾತ ಆಗಿದೆ ಎಂದು ಆರೋಪಿಗಳು ಈ ರೀತಿಯಾಗಿ ನಾವು ಮಾಡಿದರೆ ಕೊಲೆಯ ಕೇಸಿನಿಂದ ಪಾರಾಗುತ್ತೇವೆ ಎಂದು ವ್ಯವಸ್ಥಿತವಾಗಿ ಈ ರೀತಿಯಾಗಿ ಕೊಲೆ ಮಾಡಿದ್ದರಿಂದ ಆ ದಿನ ಮಹಾಂತೇಶನ ತಮ್ಮನಾದ ಸಿದ್ದು ಇವರಿಗೆ ನಿಮ್ಮ ಅಣ್ಣನಿಗೆ ಅಪಘಾತವಾಗಿದೆ ಎಂದು ಸಾಯಂಕಾಲ 7.30 ನಿಮಿಷಕ್ಕೆ ಪೊಲೀಸರಿಂದ ಫೋನ್ ಮಾಡಿ ಮಹಾಂತೇಶನ ತಮ್ಮನಿಗೆ ನೀನು ಆದಷ್ಟು ಬೇಗನೆ ಬಂದುಬಿಡು ಎಂದು ಪೊಲೀಸರು ತಿಳಿಸಿದಾಗ ಗಾಬರಿಯಿಂದ ನಾನು ಓಡಿ ಬಂದು ನಮ್ಮ ಅಣ್ಣನ ನೋಡಿದಾಗ ಇದು ಅಪಘಾತವಲ್ಲ. ಅಪಘಾತದ ಹೆಸರಿನಲ್ಲಿ ಉದ್ದೇಶ ಪೂರ್ವಕವಾಗಿ ನಮ್ಮ ಅಣ್ಣನನ್ನು ಈ ರೀತಿಯಾಗಿ ಕೊಲೆ ಮಾಡಿದ್ದಾರೆ ಎಂದು ನಾನು ಅಮೀನಗಡ ಪಿ.ಎಸ್.ಐ ಸಾಹೇಬರಿಗೆ ಹೇಳಿದರೂ ಸಹ ಅವರು ನನ್ನ ಮಾತನ್ನು ಕೇಳಲಾರದೆ ಹಾಗೂ ನಾನು ಹೇಳಿದ ಪ್ರಕಾರ ಪ್ರಕರಣವನ್ನು ದಾಖಲಿಸಲಾರದೇ ಆರೋಪಿಗಳ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಮಹಾಂತೇಶನ ತಮ್ಮನ ಹೇಳಿಕೆ ಪ್ರಕಾರ ಪ್ರಕರಣವು ದಾಖಲಿಸಿ ಕೊಳ್ಳಲಾರದೆ ಈ ಪ್ರಕರಣವು ಈ ರೀತಿ ದಾಖಲಿಸಿ ಕೊಂಡಿ– ದ್ದರಿಂದ ನಮಗೆ ಅನುಮಾನ ವ್ಯಕ್ತವಾಗುತ್ತದೆ ಆರೋಪಿಗಳಿಗೆ ಅನುಕೂಲ ಆಗುವ ಪ್ರಕಾರ ಪ್ರಕರಣವನ್ನು ದಾಖಲಿಸಿ ಕೊಂಡು ಕೈ ಬಿಟ್ಟು ದೂರುದಾರ ತಮ್ಮ ಸಿದ್ದಪ್ಪ ನಮ್ಮ ಅಣ್ಣನ ಕೊಲೆ ಮಾಡಿದ ಆರೋಪಿಗಳ ಬಗ್ಗೆ ಏನಾಯಿತು ಸರ್ ಎಂದು ಪೊಲೀಸರನ್ನು ಕೇಳಿದರೆ ನಾವು ತನಿಖೆ ಮಾಡುತ್ತೇವೆ ತನಿಖೆ ಮಾಡಿದ ನಂತರ ಗೊತ್ತಾಗುತ್ತದೆ ಎಂದು ತನಿಖೆ ಹೆಸರಿನಲ್ಲಿ ಪೊಲೀಸ್ ಅಧಿಕಾರಿಗಳು ವಿಳಂಬ ನೀತಿ ಅನುಸರಿಸಿ ಕಾಲಹರಣ ಮಾಡಿದ್ದು ಕೊಲೆ ಮಾಡಿದ ಆರೋಪಿಗಳನ್ನು ಪತ್ತೆ ಹಚ್ಚಲಾರದೆ ಇದ್ದು ಇದನ್ನು ನೋಡಿದರೆ ಪೊಲೀಸರು ಆರೋಪಿಗಳನ್ನು ಪತ್ತೆ ಹಚ್ಚಿ ಬಂಧಿಸುವಲ್ಲಿ ವಿಫಲರಾಗಿದ್ದರಿಂದ ಮಹಾಂತೇಶನ ಮೊಬೈಲ್ ಎಲ್ಲಿದೆ ಸಾರ್ ಎಂದು ಮಾಂತೇಶನ ತಮ್ಮನಾದ ಸಿದ್ದು ಪೊಲೀಸರನ್ನು ಕೇಳಿದಾಗ ಆಯ್ತು ಎರಡು ದಿನ ಬಿಟ್ಟು ನಿಮ್ಮ ಅಣ್ಣನ ಮೊಬೈಲ್ ಕೊಡುತ್ತೇವೆ ಎಂದು ಹೇಳಿದರು. ಆದರೂ ಹೊಸ ಇದುವರೆಗೆ ಮಹಾಂತೇಶನ ಮೊಬೈಲನ್ನು ಪೊಲೀಸರು ನಮಗೆ ಕೊಟ್ಟಿರುವುದಿಲ್ಲ ನಂಬರ್ ತೆಗೆದು ಕೊಂಡು ಕಾಲ್ ಲಿಸ್ಟ್ ಸರ್ಚ್ ಮಾಡಿದರೆ ಆರೋಪಿಗಳು ಯಾರೆಂದು ಗೊತ್ತಾಗುತ್ತದೆ ಗೊತ್ತಾದ ನಂತರ ಆರೋಪಿಗಳನ್ನು ಕೂಡಲೇ ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಿ ದಲಿತ ಮಹಾಂತೇಶನ ಕುಟುಂಬಕ್ಕೆ ನ್ಯಾಯ ಒದಗಿಸಿ ಕೊಡಬೇಕೆಂದು ಕರ್ನಾಟಕ ದಲಿತ ರಕ್ಷಣಾ ವೇದಿಕೆ ರಾಜ್ಯ ಸಮಿತಿ ಹಾಗೂ ಆಲೆಮಾರಿ ಬುಡಕಟ್ಟು ಮಹಾಸಭಾ ಸಮಿತಿಯ ರಾಜ್ಯ ಸಂಘಟನಾ ಕಾರ್ಯದರ್ಶಿ ಲತಾ,

ನೊಂದ ತಮ್ಮ ಸಿದ್ದಪ್ಪ ಭಗವತಿ, ಮಂಜುಳಾ ಹಳ್ಳೂರು ತಾಲೂಕ ಅಧ್ಯಕ್ಷರು ತಾಲೂಕ ಸಮಿತಿ ಬಾಗಲಕೋಟೆ ಕರ್ನಾಟಕ ದಲಿತ ರಕ್ಷಣಾ ವೇದಿಕೆ, ಕೆ ಶಂಕರ್ ನಂದಿಹಾಳ ರಾಜ್ಯ ಕಾರ್ಯದರ್ಶಿ ಅವರು ಪತ್ರಿಕೆ ಮೂಲಕ ಕೋರಿಕೆ ಆಗಿರುತ್ತದೆ.

## ಪತ್ರಕರ್ತ ವೆಂಕಟೇಶ ಸಂಪ ಅವರಿಗೆ "ರಾಷ್ಟ್ರೀಯ ಬಸವಶ್ರೀ ಪ್ರಶಸ್ತಿ" ಪ್ರಧಾನ

**ಸಿಹಿ ಕಹಿ ಸುದ್ದಿ**

**ಬೆಂಗಳೂರು :** ಕಾವ್ಯಶ್ರೀ ಚಾರಿಟೇಬಲ್ ಟ್ರಸ್ಟ್ (ರಿ) ಬೆಂಗಳೂರು, ಇವರು ಕೊಡುವ ರಾಷ್ಟ್ರ ಮಟ್ಟದ ಬಸವಶ್ರೀ ಪ್ರಶಸ್ತಿಯನ್ನು ಪತ್ರಕರ್ತ, ಸಂಪದ ಸಾಲು ಪತ್ರಿಕೆ ಸಂಪಾದಕರಾದ, ವೆಂಕಟೇಶ ಸಂಪರವರಿಗೆ 2024 ರ ಡಿಸೆಂಬರ್ 25 ರಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಪ್ರಧಾನ ಮಾಡಲಾಯಿತು.

ಕಳೆದ 18 ವರ್ಷಗಳಿಂದ ನಿರಂತರವಾಗಿ ಸಂಪದ ಸಾಲು ಎನ್ನುವ ಧನಾತ್ಮಕ ಪತ್ರಿಕೆಯನ್ನು ನಡೆಸುತ್ತಿರುವ ವೆಂಕಟೇಶ ಸಂಪರವರ ಸಾವಿರಾರು ಲೇಖನಗಳು ರಾಜ್ಯದ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಗಿವೆ ಹಾಗೂ ರೇಡಿಯೋ ಟಿವಿಗಳಲ್ಲಿ ನೂರಾರು ಕಾರ್ಯಕ್ರಮಗಳನ್ನು ನಡೆಸಿ ಕೊಟ್ಟಿದ್ದಾರೆ. ಇವರು ಹಲವಾರು ಟೀವಿ ಚಾನಲ್ ಗಳ ಪ್ಯಾನಲ್ ಡಿಸ್ಕಷನ್ ಗಳಲ್ಲಿ ಭಾಗವಹಿಸುವುದರ ಜೊತೆಗೆ ಹಲವಾರು ಸಿನಿಮಾ ಧಾರವಾಹಿಗಳಲ್ಲಿ ನಟಿಸಿದ್ದಾರೆ. ರಕ್ತದಾನ, ನೇತ್ರದಾನ, ಪರಿಸರ ಜಾಗೃತಿ



ಅಭಿಯಾನ, ನೀರು ಉಳಿಸಿ ಅಭಿಯಾನ ಸೇರಿದಂತೆ ಹಲವಾರು ಸಾಮಾಜಿಕ ಕಾರ್ಯದಲ್ಲಿ ತೊಡಗಿದ್ದಾರೆ. ಒಃಂ ಪದವೀಧರ ಆಗಿರುವ ವೆಂಕಟೇಶ ಸಂಪ ಅವರು, ಹಲವು ಮಿಶ್ರ ಬೆಳೆಗಳನ್ನು ಬೆಳೆದು, ಸಾವಯವ ಕೃಷಿಯಲ್ಲೂ ಸಾಧನೆ ಮಾಡಿದ್ದಾರೆ.

"ಸಂಪದ ಫೌಂಡೇಶನ್ ಫಾರ್ ಪಬ್ಲಿಕ್ ಅವೇರ್ನೆಸ್" ಸಂಸ್ಥೆ ಮೂಲಕ ಹಲವಾರು ಸಾಮಾಜಿಕ ಜಾಗೃತಿ ಅಭಿಯಾನ ಕಾರ್ಯಕ್ರಮವನ್ನು ನಿರಂತರವಾಗಿ ನಡೆಸುತ್ತಿದ್ದಾರೆ.

ಇದೆಲ್ಲವನ್ನು ಪರಿಗಣಿಸಿ "ರಾಷ್ಟ್ರೀಯ ಬಸವಶ್ರೀ" ಪ್ರಶಸ್ತಿಯನ್ನು ನೀಡಲಾಗಿದೆ ಎಂದು ಕಾವ್ಯಶ್ರೀ ಚಾರಿಟೇಬಲ್ ಟ್ರಸ್ಟ್ ನ ಮುಖ್ಯಸ್ಥರಾದ ಶ್ರೀ ಡಾ, ಜಿ ಶಿವಣ್ಣ ಈ ಸಂದರ್ಭದಲ್ಲಿ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಆರೂಢ ಭಾರತೀ ಮಹಾಸ್ವಾಮಿಗಳು, ಖ್ಯಾತ ಚಲನ ಚಿತ್ರ ನಟಿ ಮಾಲತಿ ಶ್ರೀ ಮೈಸೂರು, ಸ್ವಾತಿ ಬಸಪ್ಪ, ರೇವಣ್ಣ, ಸಾಹಿತಿ ರಾಮಲಿಂಗೇಶ್ವರ ಸಿಸಿರಾ, ಚಂದ್ರಶೇಖರ ಮಾಡಲಗೇರಿ, ಹೇಮಾವತಿ ಶಿವಣ್ಣ, ಸುಪ್ರಿಯಾ ನಿಪ್ಪಾಣಿ, ಸುರೇಶ್ ಕೊರೆಕೊಪ್ಪ, ಮಧು ಅಕ್ಷರಿ, ಭಾಗ್ಯ ಸರ್ವನ್, ಅಶ್ವಿನಿ ನಕ್ಷತ್ರ, ಇತರರು ಹಾಜರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಂ.ಎಂ ಶರ್ಮಾ ಬೆಳಗಾವಿ**

## ಕ್ರಿಯಾ ಯೋಜನೆ ಮಾಡಿಲ್ಲವೆಂದು ಮಹೇಂದ್ರ. ನಾಯಕ ಆಕ್ರೋಶ

**ಮಾನ್ವಿ :** ಮಾನ್ವಿ ಪುರಸಭೆಯಲ್ಲಿ 2021–23 ನೇ. ಸಾಲಿನ ವರೆಗೂ ರಾಘವೇಂದ್ರ ಅವರು ಕ್ರಿಯಾಯೋಜನೆ ಮಾಡಿಲ್ಲ, ಜನರಿಗೆ ಸೌಲಭ್ಯಗಳು ಮುಟ್ಟೋದು ಯಾವಾಗ ಎಂದು ಪುರಸಭೆಯ ವಿರೋಧ ಪಕ್ಷದ ನಾಯಕ ಮಹೇಂದ್ರ ನಾಯಕ ತಿಳಿಸಿದರು.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ಪುರಸಭೆ ಅಧ್ಯಕ್ಷೆ ಲಕ್ಷ್ಮಿ ಡಿ.ವೀರೇಶ ನೇತೃತ್ವದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದರು.

ಬಡವರಿಗೆ ಯೋಜನೆಗಳು ಸಿಗುತ್ತವೆ ಎಂದು ಪುರಸಭೆ ಯಿಂದ ಅರ್ಜಿ ಕರೆಯಲಾಗುತ್ತದೆ, ಆದರೆ ಕ್ರಿಯಾ ಯೋಜನೆಯನ್ನು ತಯಾರಿಸದ ಕಾರಣ ಎಸ್ಸಿ/ಎಸ್ಟಿ ಜನಾಂಗಕ್ಕೆ ಸಿಲಿಂಡರ್ ಯಾವಾಗ ಕೊಡುತ್ತೀರಾ ಎಂದು ಆಕ್ರೋಶ ವ್ಯಕ್ತಪಡಿಸಿದರು.



**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ವಿಜಯಪುರದ ಕೇಂದ್ರೀಯ ವಿದ್ಯಾಲಯದಲ್ಲಿ ವಾರ್ಷಿಕ ಕ್ರೀಡಾಕೂಟ

### ವಿದ್ಯಾರ್ಥಿಗಳು ಆಟೋಟಗಳಲ್ಲಿ ಸಕ್ರೀಯವಾಗಿ ಭಾಗವಹಿಸಬೇಕು: ಟಿ.ಭೂಬಾಲನ್



**ವಿಜಯಪುರ :** ನಗರದ ಟಕ್ಕೆ ರಸ್ತೆಯಲ್ಲಿರುವ ಕೇಂದ್ರೀಯ ವಿದ್ಯಾಲಯದಲ್ಲಿ ಬುಧವಾರ ರಂದು ನಡೆದ ಶಾಲೆಯ ವಾರ್ಷಿಕ ಕ್ರೀಡಾಕೂಟಕ್ಕೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಕ್ರೀಡಾ ಚಟುವಟಿಕೆಗಳ ಅತಿ ಮಹತ್ವವಾಗಿದೆ. ಶಾರೀರಿಕ ಮತ್ತು ಮಾನಸಿಕ ಸದೃಢತೆಗೆ ಕ್ರೀಡೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುವುದು ಅತೀ ಅವಶ್ಯವಾಗಿದೆ. ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು ಎಂದು ಹೇಳಿದರು. ಈ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮಕ್ಕಳ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಸಾಮೂಹಿಕ ಕವಾಯತನ್ನು ವೀಕ್ಷಕಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕ ವೃಂದ ಹಾಗೂ ಪಾಲಕರು ಭಾಗವಹಿಸಿ ಶಾಲಾ ಕ್ರೀಡಾಂಗಣದಲ್ಲಿ ಕ್ರೀಡಾ ಹಬ್ಬವನ್ನು ಆಚರಿಸಿದರು. ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿಜೇತ ಮಕ್ಕಳಿಗೆ ಜಿಲ್ಲಾಧಿಕಾರಿಗಳು ಬಹುಮಾನ ವಿತರಿಸಿದರು.

ಶಾಲೆಯ ಇಂಗ್ಲೀಷ್ ವಿಷಯ ಶಿಕ್ಷಕರಾದ ಅನಿತಾ ಜೋಸೆಫ್ ನಿರೂಪಿಸಿದರು. ಹಿರಿಯ ಉಪನ್ಯಾಸಕರಾದ ಶ್ರೀಮತಿ ಅನಾಮಿಕ ಕುಮಾರಿ ವಂದಿಸಿದರು. ಸಿಮ್ರಾನ್ ಕ್ರೀಡಾ ವರದಿ ವಾಚನ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲೆಯ ಅಂಚೆ ಇಲಾಖೆಯ ಜಿಲ್ಲಾ ಅಧೀಕ್ಷಕರಾದ ಕುಮಾರಸ್ವಾಮಿ, ಶಾಲೆಯ ಪ್ರಾಚಾರ್ಯರಾದ ಜುನ್ನಾ ರಾಮ, ಶಾಲಾ ಶಿಕ್ಷಕರಾದ ಶ್ರೀಮತಿ ಸೀಮಾ, ಶಂಕರ ಶಾಸ್ತ್ರೀ, ಸೌರಭ, ರಮೇಶ ಚವಾಣ, ಶ್ರೀಮತಿ ಸುವರ್ಣಾ ಸೀಳಿನ್, ಸಾಯಿತೇಜಸ್ವಿನಿ, ದಾದಾಸೋ, ವಿಠ್ಠಲ ಚಟ್ಟರಕಿ, ಸಂತೋಷ್ ಹಲವಾಯಿ ಹಾಗೂ ಸೋಮೇಶ್ ಅಲಗುಂಡಗಿ ಉಪಸ್ಥಿತರಿದ್ದರು.

## ಶಾಲಾ ಜೀವನದಲ್ಲಿ ಕ್ರೀಡೆ ಅತಿಮುಖ್ಯ, ಪಿಎಸ್ಐ ಸಂಗಳದ ಅಭಿಮತ

### ಶ್ರೀ ಕಾಳಿದಾಸ ಅಂತರಾಷ್ಟ್ರೀಯ ಪಬ್ಲಿಕ್ ಶಾಲೆಯ ವಾರ್ಷಿಕ ಕ್ರೀಡಾಕೂಟ





**ಬಾಗಲಕೋಟೆ :** ವಿದ್ಯಾರ್ಥಿಗಳು ತಮ್ಮ ಶಾಲಾ ಜೀವನದಲ್ಲಿ ಕ್ರೀಡೆಯನ್ನು ಪ್ರಮುಖ ಚಟುವಟಿಕೆಯನ್ನಾಗಿ ಗುರುತಿಸಿಕೊಂಡು ಇದರಿಂದ ಮುಂದಿನ ಉತ್ತಮ ನಾಗರಿಕ ರನ್ನಾಗಿ ರೂಪಿಸಿಕೊಳ್ಳಲು ಸಹಾಯ ಆಗುತ್ತದೆ ಎಂದು ಬಾಗಲಕೋಟೆ ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್ಐ ಶರಣಬಸಪ್ಪ ಸಂಗಳದ ಹೇಳಿದರು.

ನವನಗರದ ಶ್ರೀ ಕಾಳಿದಾಸ ಅಂತರಾಷ್ಟ್ರೀಯ ಪಬ್ಲಿಕ್ ಶಾಲೆಯಲ್ಲಿ ನಡೆದ ವಾರ್ಷಿಕ ಶಾಲಾ ಕ್ರೀಡಾಕೂಟ ಸಮಾರಂಭದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಯಾವುದೇ ಕ್ರೀಡೆಗಳಲ್ಲಿ ಭಾಗವಹಿಸಿ ಕ್ರೀಡಾ ಸ್ಪೂರ್ತಿ ಮೆರೆಯಬೇಕು ತಮಗೆ ಇಷ್ಟವಾದ ಕ್ರೀಡೆಗಳಲ್ಲಿ ಭಾಗವಹಿಸುವ ಮೂಲಕ ಇತರರಿಗೆ ಮಾದರಿಯಾಗಬೇಕು ಎಂದು ತಿಳಿಸಿದವರು.

ನಾವು ಚಿಕ್ಕವರಾಗಿದ್ದಾಗ ನಮಗೆ ಯಾವುದೇ ಕ್ರೀಡೆಗಳಲ್ಲಿ ಸಾಧಸಿಸಲು ಪ್ರೋತ್ಸಾಹ ಸಿಗುತ್ತಿರಲಿಲ್ಲ ಆದರೆ ನಿಮಗೆ ಈಗ ಇಷ್ಟೆಲ್ಲಾ ಅವಕಾಶವಿದ್ದು ಹೆಚ್ಚಿನದನ್ನು ಸಾಧಿಸಲು ಉತ್ತಮ ಪ್ರೋತ್ಸಾಹ ವನ್ನು ಶಾಲಾ ಶಿಕ್ಷಕರು ಹಾಗೂ ಪಾಲಕರು ಮಾಡುತ್ತಿದ್ದಾರೆ ಇದರ ಸದುಪಯೋಗ ಪಡೆದುಕೊಂಡು ಮುಂದಿನ ಜೀವನದ ಹಂತದಲ್ಲಿ ಉತ್ತಮ ನಾಗರಿಕರಾಗಲು ಪ್ರಯತ್ನಿಸಿ ಎಂದು ಹೇಳಿದರು.

ಈ ಶಾಲೆಯಲ್ಲಿನ ಮಕ್ಕಳ ಶಿಸ್ತು ಬದ್ಧತೆ ಪಥ ಸಂಚಲನ, ಕರಾಟೆ ಪ್ರದರ್ಶನ ನೋಡಿ ನನಗೆ ತುಂಬಾ ಖುಷಿಯಾಯಿತು ನಾವುಗಳು ಪೊಲೀಸರು ಯಾವಾಗಲೂ ಕ್ರಿಮಿನಲ್‌ಗಳ ಜೊತೆಗೆ ಮಾತನಾಡುತ್ತಿರುತ್ತೇವೆ ಆದರೆ ಇಲ್ಲಿ ಪುಟಾಣಿ ಮಕ್ಕಳ ಜೊತೆ ಬೆರೆತು ತುಂಬಾ ಸಂತೋಷವೆನಿಸುತ್ತಿದ್ದು ಈ ಪುಟಾಣಿ ಮಕ್ಕಳಿಗೆ ಶಿಕ್ಷಣ ನೀಡುವುದ ಅಷ್ಟು ಸುಲಭದ ಮಾತಲ್ಲ, ದೊಡ್ಡ ದೊಡ್ಡ ವಿದ್ಯಾರ್ಥಿಗಳಿಗೆ ಅಂದರೆ ಹೈಸ್ಕೂಲ್ ಪಿಯು ಕಾಲೇಜ್ ಡಿಗ್ರಿ ಕಾಲೇಜ್ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದು ಸುಲಭ ಆದರೆ ಈ ಪುಟ್ಟ ಪುಟ್ಟ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದು ಸಾಹಸವೇ ಸರಿ.

ಈ ಕಾರ್ಯವನ್ನು ಕಾಳಿದಾಸ ಶಾಲೆಯ ಶಿಕ್ಷಕರು ಮಾಡುತ್ತಿದ್ದು ಅಭಿನಂದನಾರ್ಹ ಹಾಗಾಗಿ ಈ ಸಂಸ್ಥೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಬೆಳೆಯಲಿ ಎಂದು ಹಾರೈಸಿದರು.

ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಕಾಳಿದಾಸ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಆರ್ ಬಿ ಪೂಜಾರ ನಾವು ಕೂಡ ಅಪ್ಪಟ ಗ್ರಾಮೀಣ ಪ್ರತಿಭೆಯಿದ್ದರು, ಇವತ್ತಿನ ಯುಗದಲ್ಲಿ ಸಂಪೂರ್ಣ ಬದಲಾಗಿ ಹೋಗಿದೆ ಶನಿವಾರಕ್ಕೊಮ್ಮೆ ಎಂಡಿ ಫ್ರೀಡ್ ಬಂತಂದ್ರೆ ಸಾಕು ನಮಗೆ ಅತ್ಯಂತ ಖುಷಿಯಾಗುತ್ತಿತ್ತು ಇದನ್ನ ಇವತ್ತಿನ ಶಿಕ್ಷಕರು ಮಾಡುತ್ತಿದ್ದು ಖುಷಿ ನೀಡಿದ್ದು ಉತ್ತಮ ಬೋಧನೆಯಿಂದ ಈ ವಿದ್ಯಾರ್ಥಿಗಳನ್ನು ಉತ್ತಮ ನಾಗರಿಕರನ್ನಾಗಿ ಮಾಡಲು ಸಾಧ್ಯವಾಗುತ್ತದೆ ಇಂತಹ ಒಳ್ಳೆಯ ಕಾರ್ಯಗಳು ಆಗಾಗ ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುತ್ತಿರಲಿ ಎಂದು ತಿಳಿಸಿದವರು. ಥಾಮಸ್ ಅಲ್ವಾ ಎಡಿಸನ್ ಅವರ ನಾಣ್ಣುಡಿಯಂತೆ ದೇರ್ ಇಸ್ ನೋ ಸಬ್ಸ್ಟಿಟ್ಯೂಟ್ ಫಾರ್ ಹಾರ್ಡ್ ವರ್ಕ್ ಇದನ್ನು ಅರಿತು ನಾವೆಲ್ಲರೂ ಕಠಿಣ ಪರಿಶ್ರಮದಲ್ಲಿ ತೊಡಗಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಲ್ಲಿ ಮನವರಿಕೆ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿದ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಜಿ ಎಸ್ ಪಾಟೀಲ್ ಮಾತನಾಡಿ ಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳು ಅತ್ಯಂತ ಆಸಕ್ತಿಯಿಂದ ಎಲ್ಲಾ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಚೆನ್ನಾಗಿ ಆಡಿ ಗೆಲ್ಲಬೇಕೆಂದು ಹಾರೈಸಿದರು ಇದರಿಂದ ಮುಂದೆ ಹೆಚ್ಚೆಚ್ಚು ಸಾಧಿಸಲು ಸಹಾಯವಾಗುತ್ತದೆ ಹಾಗಾಗಿ ಯಾರು ಕೂಡ ಯಾವುದೇ ಕ್ರೀಡೆಯಾಗಲಿ ಹಿಂಜರಿಯದೆ ಮುನ್ನುಗ್ಗಿ ಎಂದು ವಿದ್ಯಾರ್ಥಿಗಳಲ್ಲಿ ಹುರಿದುಂಬಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿ ಟಿ ಬಿ ಕುರುಬರ, ಪದಾಧಿಕಾರಿಗಳಾದ ಎಸ್ ವೈ ನೀಲಾರ, ಎಸ್ ಎಸ್ ದೊಡಮನಿ, ವಿ ಎ ಪಾಟೀಲ್, ಎಲ್ ವಿ ವಿರಕ್ತಿಮಠ, ಡಿ ಆರ್ ಮೇಟಿ, ಡಿಗ್ರಿ ಕಾಲೇಜ್ ಪ್ರಾಂಶುಪಾಲ ಆರ್ ಎಫ್ ಚವ್ಹಾಣ, ಕಾಳಿದಾಸ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಮೇಲ್ವಿನ್ ಬಾಬಿ ಮರ್ಜಿ, ದೈಹಿಕ ಶಿಕ್ಷಕ ಶ್ರೀಶೈಲ್ ಬೋಳರಡ್ಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ವಿದ್ಯಾರ್ಥಿನಿ ರಾಶಿ ರಜಪೂತ ನಿರೂಪಿಸಿದರು. ಶಿಕ್ಷಕಿ ಕೀರ್ತಿ ವಂದಿಸಿದರು.

## ಹೊಸಗೌಡ್ರ ಶಾಲೆಯಲ್ಲಿ ಕಲಾ ಮತ್ತು ವಿಜ್ಞಾನ ಪ್ರದರ್ಶನ

### ಮಕ್ಕಳಲ್ಲಿ ಕಲೆ ಮತ್ತು ವೈಜ್ಞಾನಿಕ ಮನೋಭಾವನೆ ಬೆಳೆಸಿರಿ: ಮಹೇಶ ಹೊಸಗೌಡ್ರ



**ಬಾದಾಮಿ :** ಶಾಲಾ ಮಕ್ಕಳಲ್ಲಿ ಕಲೆ ಮತ್ತು ವೈಜ್ಞಾನಿಕ ಮನೋಭಾವನೆ ಬೆಳೆಯಲು ಮಾದರಿ ತಯಾರಿಕೆ ಮಾಡಬೇಕು ಎಂದು ಶ್ರೀ ಮೈಲಾರಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಮಹೇಶ ಹೊಸಗೌಡ್ರ ಹೇಳಿದರು.

ಅವರು ಗುರುವಾರ ಜಯನಗರದ ಎಸ್.ಎಫ್. ಹೊಸಗೌಡ್ರ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕಲಾ ಮತ್ತು ವಿಜ್ಞಾನ ವಸ್ತುಪ್ರದರ್ಶನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಯು. ಕೆ.ಜಿ ಯಿಂದ 8 ನೇ ತರಗತಿಯ ಮಕ್ಕಳು ಎಲ್ಲ ರೀತಿಯ ಮಾದರಿಗಳನ್ನು ಮಾಡಿ ವಿದ್ಯಾರ್ಥಿಗಳು ತಮ್ಮ ಜ್ಞಾನದ ಪ್ರದರ್ಶನ ನೀಡಿದರು. ಅಭಿನವ ಒಪ್ಪತ್ತೇಶ್ವರ ಮಹಾ ಸ್ವಾಮೀಜಿಗಳು ಸಾನಿಧ್ಯ ವಹಿಸಿ ಮಾತನಾಡಿದರು. ವೇದಿಕೆಯ ಮೇಲೆ ಕ್ಷೇತ್ರ ಶಿಕ್ಷಣಾಧಿಕಾರಿ

ಕೇಶವ ಪೆಟ್ಲೂರ, ಕ್ಷೇತ್ರ ಸಮನ್ವಯಾಧಿಕಾರಿ ಎಮ್.ಬಿ ದೊಡ್ಡಪ್ಪನವರ, ಸಿಪಿಐ ಕರೆಪ್ಪ ಬನ್ನೆ, ಶಿಕ್ಷಣ ಸಂಯೋಜಕ ಬಿ.ಕೆ.ಚಿಮಲ್, ಸಮೂಹ ಸಂಪನ್ಮೂಲ ವ್ಯಕ್ತಿ ಎಮ್.ಕೆ ಬಡಿಗೇರ, ಉಪನ್ಯಾಸಕ ಶಶಿಧರ ಮೂಲಿಮನಿ, ಸಲಹೆಗಾರ ಎನ್. ಬಿ.ಪಾಟೀಲ, ಉಪನ್ಯಾಸಕ ಎಚ್. ಎಮ್ ನಿಡಗುಂದಿ, ಆಡಳಿತಾಧಿಕಾರಿ ಶಾಬನಮ ಹನಮಸಾಗರ, ಪ್ರಾಚಾರ್ಯೆ ಸರಿತಾ ಮೆಡಮ್ ಹಾಜರಿದ್ದರು.



## ಹೊಸೂರ ಗ್ರಾ.ಪಂ. ಅಧ್ಯಕ್ಷರಾಗಿ ಶಾಂತವ್ವ ಬದ್ರಿ ಆಯ್ಕೆ

**ಬಾದಾಮಿ :** ತಾಲೂಕಿನ ಹೊಸೂರು ಗ್ರಾಮ ಪಂಚಾಯಿತ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಶ್ರೀಮತಿ ಶಾಂತವ್ವ ವೀರಯ್ಯ ಬದ್ರಿ ಇವರು ಆಯ್ಕೆಯಾದರು.

# ಎಂಎ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಸಾಧನೆ



**ಬಾಗಲಕೋಟೆ :** ಇಲ್ಲಿನ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಮತ್ತು ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಇತಿಹಾಸ ಹಾಗೂ ಪ್ರಾಚ್ಯಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗದ ವಿದ್ಯಾರ್ಥಿಗಳು ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಆಗಸ್ಟ್ 2024 ರಲ್ಲಿ ನಡೆಸಿದ ಎಂಎ 4ನೇ ಸೆಮೆಸ್ಟರ್ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ತಿಳಿಸಿದ್ದಾರೆ.

ಪರೀಕ್ಷೆಗೆ ಹಾಜರಾದ ಎಲ್ಲ 27 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 12 ವಿದ್ಯಾರ್ಥಿಗಳು ಡಿಸ್ಟಿಂಕಶನ್‌ದಲ್ಲಿ ಹಾಗೂ 15 ವಿದ್ಯಾರ್ಥಿಗಳು ಪ್ರಥಮ ವರ್ಗದಲ್ಲಿ ತೇರ್ಗಡೆಯಾಗಿದ್ದಾರೆ.

ಮೀನಾಕ್ಷಿ ಮನಗೂಳಿ (77.16%) ಪ್ರಥಮ, ಸುಶ್ಮಾ ದೇಸಾಯಿ (76%) ದ್ವಿತೀಯ ಹಾಗೂ ಪಲ್ಲವಿ ಗೌಡರ (75.66%) ತೃತೀಯ ಸ್ಥಾನ ಪಡೆದಿದ್ದಾರೆ.

ಸಂಸ್ಥೆಯ ಕಾರ್ಯಾಧ್ಯಕ್ಷೆ ಶ್ರೀಮತಿ. ಶ್ರೀಲತಾ ಹೆರಂಜಲ್, ಗೌರವ ಕಾರ್ಯದರ್ಶಿ ಡಾ. ಗಿರೀಶ ಮಸೂರಕರ, ಕಾಲೇಜು ಉಪವಿಭಾಗದ ಅಧ್ಯಕ್ಷ ಡಾ.ಪಿ.ಆರ್.ಜೋಶಿ ಸಂಯೋಜಕ ಎಸ್. ವಾಯ್. ಬೊಮ್ಮಣ್ಣವರ ಹಾಗೂ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿ ಈ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

# ಮಕ್ಕಳ ಇಕೋ ಕ್ಲಬ್, ಉಪನ್ಯಾಸ ಕಾರ್ಯಕ್ರಮ
## ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ: ಪಿ.ವಿ.ಹಿರೇಮಠ



**ಬಾದಾಮಿ :** ಪರಿಸರ ಸಂರಕ್ಷಣೆಯ ಜೊತೆಗೆ ಸಸ್ಯಗಳ ನಾಟಿ ಮಾಡಿ ನಮ್ಮ ಸುತ್ತಲಿನ ಸಸ್ಯ ಸಂಕುಲವನ್ನು ಉಳಿಸಿ ಬೆಳೆಸಬೇಕು ಎಂದು ಕಬ್ಬಲಗೇರಿ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿ ಪಿ.ವ್ಹಿ.ಹಿರೇಮಠ ಮಕ್ಕಳಿಗೆ ಸಲಹೆ ನೀಡಿದರು.

ಅವರು ತಾಲೂಕಿನ ಕಬ್ಬಲಗೇರಿ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಶಾಲೆಯ ಮಕ್ಕಳ ಇಕೋ ಕ್ಲಬ್ ಹಾಗೂ ಪರಿಸರ ಜಾಗೃತಿ ಸಮಿತಿಗಳ ಸಂಯೋಜನೆ ಅಡಿಯಲ್ಲಿ ಸಸ್ಯಗಳ ನಾಟಿ ಹಾಗೂ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಕುರಿತು ತಿಳುವಳಿಕಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸಹಶಿಕ್ಷಕ ಎ.ಎಸ್.ಮುಲ್ಲಾ ಅತಿಥಿ ಉಪನ್ಯಾಸ ನೀಡಿ ಮಾತನಾಡಿ ಮಕ್ಕಳು ತಮ್ಮ ಮನೆಯ ಹೊರ ಆವರಣದಲ್ಲಿ, ಹೊಲ ಗದ್ದೆಗಳಲ್ಲಿ ಕನಿಷ್ಠ ಐದಾರು ಸಸ್ಯಗಳನ್ನು ನೆಡುವುದರ ಮೂಲಕ ನಮ್ಮ ಸಸ್ಯಸಂಕುಲದ ಸಂಖ್ಯೆಯನ್ನು ಹೆಚ್ಚಿಸಬೇಕೆಂದರು.

ಸಹಶಿಕ್ಷಕ ಎಸ್.ವ್ಹಿ.ಉದಗಟ್ಟಿ ಮಾತನಾಡಿ ಶ್ರೇಷ್ಠ ಸಸ್ಯತಜ್ಞ ಜಗದೀಶ ಚಂದ್ರ ಭೋಸ್ ಅವರ ಸೈದ್ಧಾಂತಿಕ ಬೋಧನೆಗಳನ್ನು ನಮ್ಮ ದಿನ ನಿತ್ಯದ ಜೀವನದಲ್ಲಿ ನೆನೆದು ಸಸಿಗಳ ಸಂರಕ್ಷಣೆ ಮಾಡಬೇಕೆಂದು ತಿಳಿಸಿದರು.

ಐ.ಪಿ.ಹಲಗಲಿ ಸ್ವಾಗತಿಸಿದರು. ಪಿ.ಟಿ.ನೀಲಗುಂದ ವಂದಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಸಿಬ್ಬಂದಿ ಮತ್ತು ಮಕ್ಕಳು ಬಾಗಿಯಾಗಿ ಸಸಿ ನೆಟ್ಟು ಸಂಭ್ರಮಿಸಿದರು ಎಂದು ಸಂಯೋಜನಾಧಿಕಾರಿ ಶ್ರೀಮತಿ ಆರ್ ಡಿ ದಯಪುಲೆ ಮತ್ತು ಶಿವಯೋಗಿ ಕುಂಬಾರ ತಿಳಿಸಿದರು.

### ಮುರನಾಳ ಶ್ರೀಮಳೇರಾಜೇಂದ್ರಸ್ವಾಮಿಯ ಕಾರ್ತಿಕೋತ್ಸವ ನಿಮಿತ್ಯ
# ಮುರನಾಳದಲ್ಲಿ ಲಕ್ಷದೀಪೋತ್ಸವ ಸಂಭ್ರಮ

**ಬಾಗಲಕೋಟೆ :** ಎಲ್ಲಿ ನೋಡಿದಲ್ಲಿ ದೀಪಗಳ ಸಾಲು ಸಾಲು ಕತ್ತಲೆಯಲ್ಲಿ ಬೇಳಕಿ ಪ್ರಕಾಶ ಭಕ್ತಿಭಾವದ ಜ್ಞಾನ ಬೆಳಕು, ಲಕ್ಷ ದೀಪೋತ್ಸವದ ಸಂಭ್ರಮ ಮನೆ ಮಾಡಿತ್ತು, ಇದು ಕಂಡುಬಂದಿದ್ದು ಸುಕ್ಷೇತ್ರ ಮುರನಾಳ ಪುನರ್ವಸತಿ ಕೇಂದ್ರದಲ್ಲಿ ಇದೇ ಗುರುವಾರ ಶ್ರೀ ಜಗದ್ಗುರು ಮಳೇರಾಜೇಂದ್ರಸ್ವಾಮಿಯ ಕಾರ್ತಿಕೋತ್ಸವ ನಿಮಿತ್ಯ ಲಕ್ಷ ದೀಪೋತ್ಸವ ಅದ್ದೂರಿಯಾಗಿ ಜರುಗಿತು.

ಮುರನಾಳ ಪುನರ್ವಸತಿ ಕೇಂದ್ರದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಕುಡಾ ಶ್ರೀ ಮಳೆರಾಜೇಂದ್ರಸ್ವಾಮಿಯ ಕಾರ್ತಿಕೋತ್ಸವ ನಿಮಿತ್ಯ ಶ್ರೀ ಮಳೆರಾಜೇಂದ್ರಸ್ವಾಮಿಮಠದ ಗರ್ಭ ಗುಡಿ ಆವರಣದಲ್ಲಿ ಶ್ರೀಮಠ ಪೂಜ್ಯರಾದ ಶ್ರೀ ಮೌನೇಶ್ವರಮಹಾಸ್ವಾಮಿಗಳು ಮಹಾಪುರುಷ ಇವರ ನೇತೃತ್ವದಲ್ಲಿ ಲಕ್ಷ ದೀಪೋತ್ಸವ ಹಾಗೂ ಶ್ರೀಮಠದ ಹಿರಿಯ ಪೂಜ್ಯರಾದ ಶ್ರೀ ಮಳೇರಾಜೇಂದ್ರಮಹಾಸ್ವಾಮಿಗಳವರ ಗುರುವಂದನಾ ಹಾಗೂ ತುಲಾಬಾರ ಕಾರ್ಯಕ್ರಮ ಮತ್ತು ಎಸ್.ಎಸ್.ಎಲ್.ಸಿ ಮತ್ತು ಪಿಯುಸಿಯಲ್ಲಿ ಗ–ರಿಷ್ಠ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿಜೃಂಭನೆಯಿಂದ ಜರುಗಿದವು, ಕಮತಗಿ ಕೋಟೆಕಲ್ಲನ ಹೊಳೆ ಹುಚ್ಚೇಶ್ವರ ಸಂಸ್ಥಾನಮಠ ಹುಚ್ಚೇಶ್ವರ ಸ್ವಾಮಿಗಳು ಲಕ್ಷ ದೀಪೋತ್ಸವನ್ನು ಉದ್ಘಾಟಿಸಿ ಮಾತನಾಡಿ ಜಗದ್ಗುರು ಶ್ರೀ ಮಳೇರಾಜೇಂದ್ರಸ್ವಾಮಿ





ಮಠ ವೆಂದರೆ ಈ ಭಾಗದ ರೈತರ ವಿಶ್ವವಿದ್ಯಾಲಯವಿದ್ದಂತೆ, ಮಳೆ ಆಗದಿದೆ ಇದ್ದಾಗ ರೈತರು ಈಮಠಕ್ಕೆ ಬಂದು ಮಳೆ ಕೇಳುವ ಪದ್ದತಿ ಈಗಲೂ ಇದೆ, ಹಳ್ಳಿಗಳಲ್ಲಿ ಶ್ರೀಗಳು ಬಿತ್ತನೆಗೆ ಬೀಜ ನೀಡುವು ಸಂಪ್ರದಾಯವ ಚಾಲ್ತಿಯಲ್ಲಿದೆ, ಅನ್ನದಾಸೋಹ,ಜ್ಞಾನದಾಸೋಹ,ಸಂಗೀತ ದಾಸೋಹದ ಮಠವಾಗಿದ್ದು, ಜನರಿಗೆ ಒಂದು ಶಕ್ತಿಯಾಗಿದೆ, ಮನದ ಕತ್ತಲೆಯನ್ನು ದೀಪಗಳ ಜ್ಞಾನದ ಬೆಳಕಿನಿಂದ ತೆಗೆದು ಹಾಕಿ ಹೊಸ ಬೆಳಕಿನೊಂದಿಗೆ ಹೋಸ ಜೀವನವನ್ನು ಸಾಗಿಸುವುದೆ ಈ ಲಕ್ಷದೀಪೋತ್ಸವದ ಉದ್ದೇಶ ವಾಗಿದೆ ಎಂದರು.

ಕಾರ್ಯಕ್ರಮದ ದಿವ್ಯಸಾನಿದ್ಯವನ್ನು ಶ್ರೀಮಠ ಹಿರಿಯ ಪೂಜ್ಯರಾದ ಮಳಿಯಪ್ಪಯ್ಯ ಸ್ವಾಮಿಗಳು ಆಶೀರ್ವಚನ ನೀಡಿದ ಅವರು ಶ್ರೀಮಠದ ತ್ರೀವಳಿದಾಸೋಹ ವಿಶ್ವಕ್ಕೆ ಮಾದರಿಯಾಗಿದ್ದು, ಸರ್ವಧರ್ಮ ಸಮನ್ವಯ ತತ್ವ ಸಾರಿದ ಈ ಮಠ ಜಲತತ್ವ ಸಿದ್ದಾಂತವನ್ನು ಪ್ರತಿಪಾದಿಸಿದೆ, ನಿತ್ಯ ಮಠದಲ್ಲಿ ಜಲಕ್ಕೆ ಪೂಜೆ ಸಲ್ಲಿಸುತ್ತಾ ಬಂದಿರುವುದು ವಿಶೇಷ ಎಂದರು.

ಅಂಕಲಿಮಠ ಶ್ರೀಗಳಾ ಬಸವರಾಜ ಸ್ವಾಮಿಗಳು, ಗುಳೆದಗುಡ್ಡದ ಕಾಶಿನಾಥ ಮಹಾಸ್ವಾಮಿಗಳು, ಕೋಣ್ಣೂ–ರಿನ ಡಾ.ಶಿಕುಮಾರ ಶಿವಾಚಾರ್ಯ ಸ್ವಾಮಿಗಳು,ಯಾದಗಿರಿ ಏಕದಂಡಗಿ ಮಠದ ಕುಮಾರ ಮಹಾಸ್ವಾಮಿಗಳು, ಗುರುನಾಥಸ್ವಾಮಿಗಳು, ಜಗನ್ನಾಥ–'ಸ್ವಾಮಿಗಳು, ಮೇಘರಾಜಸ್ವಾಮಿಗಳು, ಗಂಗಾಧರಸ್ವಾಮಿಗಳು, ಹುಬ್ಬಳ್ಳಿಯ ಜ್ಯೋತಿಷ್ಯ ವಿದ್ವಾಂಸರಾದ ಪ್ರಶಾಂತ ಕಟ್ಟಿ ಗುರುಗಳು ಪಾವನ ಸಾನಿದ್ಯವಹಿಸಿದ್ದರು. ಗಂಗಾಧರ ದೊಡಮನಿ, ಮಲ್ಲಿಕಾರ್ಜುನ ದೊಡಮನಿ,ಮಲ್ಲಣ್ಣಅಪರಾದಿ,ಸಂಗಮೇಶ ದೊಡಮನಿ, ಹುಚ್ಚಪ್ಪ ಶಿರೂರ, ಶ್ರೀಶೈಲ ಬಾಳಿಕಾಯಿ, ಮಂಜು ಬಾರಕೇರ, ಪ್ರಭು ಬಾಳಿಕಾಯಿ, ಶಿವಣ್ಣ ಬೂದಿಹಾಳ,ರಂಗಪ್ಪ ರೊಳ್ಳಿ,ಸಿದ್ದಪ್ಪ ಮುಚಖಂಡಿ. ಸಿದ್ದಪ್ಪ ಬಂಗಿ, ಅಶೋಕ ಪತ್ತಾರ, ಶೇಖಪ್ಪ ಗಣಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

**ಗುರುವಂದನಾ ಹಾಗೂ ತುಲಾಭಾರ:** ಶ್ರೀಮಠದ ಹಿರಿಯ ಪೂಜ್ಯರಾದ ಮಳಿಯಪ್ಪಯ್ಯ ಸ್ವಾಮಿಗಳಿಗೆ ತುಲಾಬಾರ ಸೇವೆ ಮಾಡಿ ಅವರಿಗೆ ಗುರುವಂದನೆಯನ್ನು ಸಲ್ಲಿಸಲಾಯಿತು, ನಂತರ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ, ಕನ್ನಡ ಕೋಗಿಲೆ ಹಾಗೂ ಸರಿಗಮಪ ಖ್ಯಾತಿಯ ಗಾಯಕರಿಂದ ಸಾಂಸ್ಕೃತಿಕ ರಸಮಂಜರಿ ಕಾರ್ಯಕ್ರಮಗಳು ನೆರೆದ ಜನರನ್ನು ಅನುರಂಜಿಸಿದವು.

# ಅಮಿತ್ ಶಾ ಕೂಡಲೇ ದೇಶದ ಜನರ ಕ್ಷಮಾಪಣೆ ಕೇಳಬೇಕು

**ಇಳಕಲ್ :** ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ ಆಕ್ಷೇಪಾರ್ಹ ಹೇಳಿಕೆ ವಿರುದ್ಧ ಕರ್ನಾಟಕ ಅಲ್ಪಸಂಖ್ಯಾತರ ಹಿಂದುಳಿದವರ ದಲಿತರ ಒಕ್ಕೂಟ ಇಲಕಲ್ ನಗರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಪದಾಧಿಕಾರಿಗಳು, ಅಮಿತ್ ಶಾ ಅವರು ಸಂಸತ್ತಿನಲ್ಲಿ ಮಾತನಾಡುವ ಸಂದರ್ಭದಲ್ಲಿ, "ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್ ಇಷ್ಟು ಸಲ ದೇವರ ನಾಮಸ್ಮರಣೆ ಮಾಡಿದ್ದರೆ ಏಳೇಳು ಜನ್ಮಕ್ಕೂ ಸ್ವರ್ಗಕ್ಕೆ ಹೋಗುತ್ತಿದ್ದರು" ಎಂದು ಸಂವಿಧಾನ ಶಿಲ್ಪಿ ಅಂಬೇಡ್ಕರ್‌ಬಗ್ಗೆ ಅವಹೇಳನಕಾರಿ ರೀತಿಯಲ್ಲಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿದರು. ಅಮಿತ್ ಶಾ ಅವರ ಈ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ ಅವರು, ಕೇಂದ್ರ ಗೃಹ ಸಚಿವರು ತಕ್ಷಣವೇ ರಾಜೀನಾಮೆ ನೀಡಬೇಕು ಹಾಗೂ ದೇಶದ ಜನರ ಕ್ಷಮಾಪಣೆ ಕೇಳಬೇಕೆಂದು ಒತ್ತಾಯಿಸಿದರು. ಕ್ಷಮಾಪಣೆ ಕೇಳದಿದ್ದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು




ಪತ್ರಿಕಾಗೋಷ್ಠಿಯಲ್ಲಿ ಅಹಿಂದ ಸಂಘಟನೆಯ ಪದಾಧಿಕಾ–ರಿಗಳಾದ ಜಿಲ್ಲಾ ಯುವ ಘಟಕದ ಅಧ್ಯಕ್ಷ ಚಂದ್ರಶೇಖರ್ ಯಲ್ಲಪ್ಪ ಬಸರಗಿಡದ, ಜಿಲ್ಲಾ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣದ ಅಧ್ಯಕ್ಷ ರಫಿಕ್ ಮುಲ್ಲಾ, ಹಾಗೂ ಕಾಂಗ್ರೆಸ್ ಮುಖಂಡ ಬಸವರಾಜ್ ಅಂಗಡಿ (ಸೋಮಲಾಪುರ್) ಉಪಸ್ಥಿತರಿದ್ದರು.

# ವರಕವಿ ಈಶ್ವರ ಸಣಕಲ್ಲರ 118ನೇ ಜಯಂತ್ಯೋತ್ಸವ




**ರಬಕವಿ–ಬನಹಟ್ಟಿ :** ಜಗವೆಲ್ಲ ನಗುತಿರಲಿ ಜಗದಳವು ನನಗಿರಲಿ ಎಂದು ಹಾಡಿದ ವರಕವಿ ಈಶ್ವರ ಸಣಕಲ್ಲರು ಬಡತನದಲ್ಲಿಯೂ ಬೆಳಗಿದ ಸ್ವಾಭಿಮಾನಿ ಕವಿಯಾಗಿದ್ದರು ಎಂದು ಹಾಸ್ಯ ಸಾಹಿತಿ ಯಶವಂತ ವಾಜಂತ್ರಿ ತಿಳಿಸಿದರು.

ಅವರು ಶುಕ್ರವಾರ ಇಲ್ಲಿನ ಎಂ. ವಿ. ಪಟ್ಟಣ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ವರಕವಿ ಈಶ್ವರ ಸಣಕಲ್ಲರ 118 ನೆಯ ಜಯಂತ್ಯೋತ್ಸವ ಸಂದರ್ಭದಲ್ಲಿ ಮಾತನಾಡಿದರು.

ಸಣಕಲ್ಲರ ಅಪ್ರಕಟಿತ ಸಾಹಿತ್ಯದ ಮುದ್ರಣ ಕಾರ್ಯ ನಡೆಯುತ್ತಿದ್ದು, ಈಗಲೂ ಅವರ ಹಸ್ತಪ್ರತಿಗಳನ್ನು ಹೊಂದಿದವರು ಅವುಗಳನ್ನು ನೀಡಿದರೆ ಬಹಳಷ್ಟು ಅನುಕೂಲವಾಗುವುದು ಎಂದು ವಾಜಂತ್ರಿ ತಿಳಿಸಿದರು.

ನಗರದ ಕನ್ನಡ ಸಂಘಟನೆಯ ಮುಖ್ಯಸ್ಥ ಚಿದಾನಂದ ಸೊಲ್ಲಾಪುರ ಮಾತನಾಡಿ, ಕನ್ನಡ ಸಾಹಿತ್ಯದಲ್ಲಿ ಇಬ್ಬರು ವರಕವಿಗಳು. ಒಬ್ಬರು ಬೇಂದ್ರೆಯಾದರೆ ಮತ್ತೊಬ್ಬರು ಈಶ್ವರ ಸಣಕಲ್ಲರು. ಈಶ್ವರ ಸಣಕಲ್ಲ ಪ್ರತಿಷ್ಠಾನ ನಿರ್ಮಾಣವಾಗಬೇಕು. ಪ್ರತಿಷ್ಠಾಪನದ ಅಡಿಯಲ್ಲಿ ಅನೇಕ ಸಾಹಿತ್ಯ ಚಟುವಟಿಕೆಗಳು ನಡೆಯಬೇಕು.

ಈಶ್ವರ ಸಣಕಲ್ಲರ ಪದ್ಯಗಳನ್ನು ಶಾಲಾ ಕಾಲೇಜುಗಳ ಪಠ್ಯಪುಸ್ತಕಗಳಲ್ಲಿ ಅಳವಡಿಸಿಕೊಳ್ಳಬೇಕು. ಈಶ್ವರ ಸಣಕಲ್ಲರ ಕುರಿತು ನಮ್ಮ ಮಕ್ಕಳಿಗೆ ತಿಳಿಸಬೇಕು ಎಂದು ಸೊಲ್ಲಾಪುರ ತಿಳಿಸಿದರು.

ಸಂಸ್ಥೆಯ ಕಾರ್ಯಾಧ್ಯಕ್ಷ ಬಸವರಾಜ ಯೆಂಡಿಗೇರಿ ಸಣಕಲ್ಲರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ನಾರಾಯಣ ಬೋರಗಿ ನಾಯಕ, ಚಂದ್ರಶೇಖರ ಭುಯ್ಯಾರ, ಬಿ. ಎಂ. ಮಟ್ಟಿಕಲ್ಲಿ, ಬಿ. ಎಸ್. ಕಾಂಬಳೆ, ಪಿ.ಎಚ್. ಪ್ರತಾಪ, ರಾಜೇಶ ನೋಟದ, ಮಲ್ಲಿಕಾರ್ಜುನ ಕೊಣ್ಣೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಬೇಡಿಕೆ ಈಡೇರಿಸಲು ಅಕ್ಷರ ದಾಸೋಹ ನೌಕರರ ಪ್ರತಿಭಟನೆ



**ಬಾಗಲಕೋಟೆ :** ನಗರದಲ್ಲಿ ಗುರುವಾರ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದಿಂದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಂದೆ ನಡೆದ ಈ ಪ್ರತಿಭಟನೆಯಲ್ಲಿ ನೂರಾರು ಅಕ್ಷರ ದಾಸೋಹ ನೌಕರರು ಭಾಗವಹಿಸಿದ್ದರು. ನೌಕರರು ವೇತನ ಹೆಚ್ಚಳ, ನಿವೃತ್ತಿ ನಂತರದ ಸೌಲಭ್ಯಗಳು, ಹಾಗೂ ಇಡಿಗಂಟು (ಪಿಂಚಣಿ) ನೀಡುವಂತೆ ಸರ್ಕಾರವನ್ನು ಒತ್ತಾಯಿಸಿದರು.

ನಮ್ಮ ಹಕ್ಕುಗಳು ಕೊಳ್ಳೆ ಹೊಡೆಯಲಾಗುತ್ತಿದೆ ಎಂದು ಘೋಷಣೆಗಳನ್ನು ಕೂಗಿದರು. ನೌಕರರ ಬಡತನ ನಿಭಾಯಿಸಲು ಮತ್ತು ಬದುಕಿನ ದೈನಂದಿನ ಅಗತ್ಯಗಳನ್ನು ಪೂರೈಸಲು ವೇತನ ಹೆಚ್ಚಳ ಅಗತ್ಯವಿದೆ ಎಂದು ಪ್ರತಿಭಟನಾಕಾರರು ಹೇಳಿದರು.

ಪ್ರತಿಭಟನೆಯ ಬಳಿಕ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು. ಮನವಿಯಲ್ಲಿ ತಮ್ಮ ಬೇಡಿಕೆಗಳನ್ನು ತ್ವರಿತವಾಗಿ ಈಡೇರಿಸುವಂತೆ ಮನವಿ ಮಾಡಲಾಗಿದ್ದು, ಇದನ್ನು ಪರಿಗಣಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಸಿದ್ದಮ್ಮ ಜಿ. ಸುನಂದಾ, ರೇಖಾ ಮ್ಯಾಗೇರಿ, ಜ್ಯೋತಿ, ಮಹಾದೇವಿ, ಸಾವಿತ್ರಿ, ಕಸ್ತೂರಿ, ಶೈಲಾ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

### ತಿಂಗಳ ನಂತರ ನೇಕಾರರ ಹೋರಾಟಕ್ಕೆ ಅಂತ್ಯ | ಸಚಿವರಿಂದ ನಿಂಬೆರಸ ಕುಡಿದು ಸತ್ಯಾಗ್ರಹ ಕೈಬಿಟ್ಟ ನೇಕಾರರು
# ಸಂಘರ್ಷ ಬೇಡ, ಸಾಮರಸ್ಯವಿರಲಿ–ನೇಕಾರರಿಗೆ ಕಿವಿಮಾತು

**ರಬಕವಿ–ಬನಹಟ್ಟಿ :** ಬರೋಬ್ಬರಿ ತಿಂಗಳ ನಂತರ ಇಲ್ಲಿನ ಕೆಎಚ್ಡಿಸಿ ಪ್ರಧಾನ ಕಚೇರಿ ಎದುರು ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ನಡೆಸುತ್ತಿದ್ದ ಕೈಮಗ್ಗ ನೇಕಾರರ ಸತ್ಯಾಗ್ರಹವನ್ನು ಜವಳಿ ಸಚಿವ ಶಿವಾನಂದ ಪಾಟೀಲರ ಭರವಸೆ ಮೇರೆಗೆ ಅಂತ್ಯವಾಗುವಲ್ಲಿ ಕಾರಣವಾಯಿತು.

ಶುಕ್ರವಾರ ಸಂಜೆ ಸ್ಥಳಕ್ಕೆ ಆಗಮಿಸಿದ ಸಚಿವ ಶಿವಾನಂದ ಪಾಟೀಲ, ಸತ್ಯಾಗ್ರಹ ನಿರತರ ಮನವೊಲಿಸುವಲ್ಲಿ ಯಶಸ್ವಿಯಾದರು. ನೇಕಾರರು ಎಂದಿಗೂ ಹೋರಾಟ ನಡೆಸಬಾರದು ಬದಲಾಗಿ ಸಮಸ್ಯೆಗಳಿಗೆ ಸರ್ಕಾರದೊಂದಿಗೆ ಸಂವಾದ ಅಥವಾ ಮಾತುಕತೆ ನಡೆಸಿ ನಂತರ ಹೋರಾಟಗಳಂತಹ ವ್ಯವಸ್ಥೆಗೆ ಅಣಿಯಾಗಬೇಕು. ದುಡಿಮೆಯಿಂದಲೇ ದಿನಂಪ್ರತಿ ಉಪಜೀವನ ನೇಕಾರರದ್ದು, ಉಪವಾಸದೊಂದಿಗೆ ನೀವು ಹೋರಾಟ ಮಾಡಿದ್ದು ನನಗೂ ಬೇಸರವೆಂದು ಪಾಟೀಲ ತಿಳಿಸಿದರು.

ಮನೆಗಳಿಗೆ ಸಿಟಿಎಸ್ ಹಾಗು ನಿವೇಶನ ಹಂಚುವ ವಿಚಾರದಿಂದ ಕೈಬಿಡಬೇಕು. ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ ಕಾರಣ ತಾಂತ್ರಿಕವಾಗಿ ಮುಂದಿನ



ದಿನಗಳಲ್ಲಿ ಸರಿಪಡಿಸಲಾಗುವದು. ಸದ್ಯ ಅಥವಾ ಮುಂದೆಯೂ ಸಹಿತ ಯಾರನ್ನೂ ಒಕ್ಕಲೆಬ್ಬಿಸುವದಿಲ್ಲ. ನೇಕಾರರು ಸುರಕ್ಷಿತವಾಗಿ ತಮ್ಮ ಮನೆಗಳಿಲ್ಲರಬಹುದು ಎಂದರು.

ಸಾಕಷ್ಟು ಸಮಸ್ಯೆಗಳು ನಿಗಮದಲ್ಲಿವೆ. ಅರಣ್ಯ ಇಲಾಖೆಯಿಂದ ಲೀಜ್ ವಿಸ್ತರಣೆಯಾಗಬೇಕಿದ್ದು, ನೇಕಾರ ಸಮುದಾಯದಲ್ಲಿನ ನಿಗಮಗಳೆರಡನ್ನು ಒಗ್ಗೂಡಿಸಿ ಅಭಿವೃದ್ಧಿ ಪಡಿಸುವ ಯೋಚನೆಯಲ್ಲಿದ್ದೇವೆ. ಅವೆಲ್ಲವುಗಳ ಪರಿಹಾರಕ್ಕೆ ನೇಕಾರರ ಸಹಕಾರ ಬೇಕಿದೆ ಎಂದರು. ತಮ್ಮ ಹೋರಾಟದ ಅವಧಿ 8–10 ದಿನಗಳಿರಲಿ ಬದಲಾಗಿ ತಿಂಗಳಾನುಗಟ್ಟಲೆ ನಡೆಸುವದು ಅಸಂಬದ್ಧವಾದುದು. ಕಾನೂನಾತ್ಮಕ ವಿಚಾರಣೆಯೊಂದಿಗೆ ಹೋರಾಟ ಕೈಗೊಂಡಲ್ಲಿ ಸೂಕ್ತವೆಂದು ನೇಕಾರರಿಗೆ ಸಚಿವರು ಕಿವಿಮಾತು ಹೇಳಿದರು.

ಆಡಿಟ್ ಆಗಿಲ್ಲ: ಕಳೆದ 2019 ರಿಂದ ಕೆಎಚ್ಡಿಸಿ ನಿಗಮದಲ್ಲಿ ಲೆಕ್ಕ ಪರಿಶೋಧನೆಯಾಗಿಲ್ಲ. ಇದೀಗ ನಡೆಸಲಾಗುತ್ತಿದ್ದು, ಇನ್ನೂ ಮೂರು ವರ್ಷಗಳದ್ದು ಬಾಕಿಯಿದ್ದು, ಶೀಘ್ರ ಮುಗಿಸಲಾಗುವದು. ಲಾಭ, ಹಾನಿ, ಹಗರಣ ಸೇರಿದಂತೆ ಯಾವುದೇ ಮಾಹಿತಿ ದೊರೆತಿಲ್ಲ. ಒಟ್ಟಾರೆ ಲೋಪದೋಷಗಳು ಬೆಟ್ಟದಷ್ಟಿದ್ದು, ನೂರಾರು ಕೋಟಿ ರೂ.ಗಳಷ್ಟು ನಿಗಮಕ್ಕೆ ಹಾನಿಯಾಗಿದೆ ಎಂದು ಸ್ವತಃ ಸಚಿವರೇ ಒಪ್ಪಿಕೊಂಡ ಪ್ರಸಂಗ ನಡೆಯಿತು.

ಎಕರೆ ನಿವೇಶನ: ಸರ್ಕಾರದಿಂದ ಶೀಘ್ರವೇ ಎಕರೆಯಷ್ಟು ಭೂಮಿ ಪಡೆದು ನೇಕಾರರ ಶೆಡ್ಡೊಂದಿಗೆ ಮನೆ ನಿರ್ಮಾಣಕ್ಕೆ ಅನುಮತಿ ಪಡೆದು ನಿವೇಶನ ಹಂಚಿಕೆ ಮಾಡಲಾಗುವದು. ಸದ್ಯ ಡಚ್ ಕಾಲನಿಯಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ಸಿಟಿಎಸ್ ಉತಾರೆ ಸಿಗುವದಿಲ್ಲವೆಂದು ಸ್ಪಷ್ಟಪಡಿಸಿದ್ದಲ್ಲದೆ, ಸದರಿ ಭೂಮಿ ಅರಣ್ಯ ಇಲಾಖೆಯದ್ದಾಗಿದ್ದು, ಸರ್ಕಾರ ಮಟ್ಟದಲ್ಲಿ ಕಂದಾಯ ಭೂಮಿಯಾಗಿ ಪರಿವರ್ತನೆಯಾದ ನಂತರ ಮುಂದಿನ ದಿನಗಳಲ್ಲಿ ದೊರೆಯುವದೆಂದರು.

ರಬಕವಿ–ಬನಹಟ್ಟಿಗೆ ಬಂಪರ್ ಕೊಡುಗೆ: ಬರುವ ಬಜೆಟ್ನಲ್ಲಿ ರಬಕವಿ–ಬನಹಟ್ಟಿ ತಾಲೂಕಿನ ನೇಕಾರರಿಗೆ ಬಂಪರ್ ಕೊಡುಗೆ ನೀಡುವದಾಗಿ ಸಚಿವ ಶಿವಾನಂದ ಪಾಟೀಲ ತಿಳಿಸಿದರು. 55 ಸಾವಿರಕ್ಕೂ ಅಧಿಕ ನೇಕಾರರು ತಾಲೂಕಿನಲ್ಲಿದ್ದಾರೆ. ಜವಳಿ ಪಾರ್ಕ್ ಸೇರಿದಂತೆ ಕೋನ್ ಡ್ರೈಯಿಂಗ್ಗಳ ಅವಶ್ಯಕತೆಯಿದೆ. ಪ್ರಸಕ್ತ ವರ್ಷ ಹೆಚ್ಚಿನ ಕಾಳಜಿಯೊಂದಿಗೆ ಜವಳಿ ಕ್ಷೇತ್ರದ ಪುನಶ್ಚೇತನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.

# ಅಮಿತ್ ಶಾ ಹೇಳಿಕೆ ಖಂಡಿಸಿ ತೇರದಾಳ ದಲಿತರಿಂದ ಪ್ರತಿಭಟನೆ



**ತೇರದಾಳ :** ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ ಕೇಂದ್ರ ಸಚಿವ ಅಮಿತ್ ಶಾ ಅವರ ಹೇಳಿಕೆಯನ್ನು ಖಂಡಿಸಿ ಪಟ್ಟಣದಲ್ಲಿ ಶುಕ್ರವಾರ ದಲಿತ ಬಾಂಧವರು ತಕ್ಷಶಿಲಾ ಬುದ್ಧ ವಿಹಾರ ಇಂಟರ್ ನ್ಯಾಷನಲ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಹಾಗೂ ಬೌದ್ಧ ಗುರುಗಳಾದ ಬೋಧಿಪ್ರಜ್ಞಾ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಬಸವೇಶ್ವರ ವೃತ್ತ ಬಳಿ ಮಾನವ ಸರಪಳಿ ನಿರ್ಮಿಸಿ ಕೇಂದ್ರ ಸಚಿವ ಅಮಿತ್ ಶಾ ಪ್ರತಿಕೃತಿ ದಹನ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬೋಧಿ ಪ್ರಜ್ಞಾ ಅವರು, ಅಂಬೇಡ್ಕರ್ ಅವರ ಸಂವಿಧಾನ ರಚನೆಯಿಂದಲೇ ಅಮಿತ್ ಶಹಾ ಸಂಸತ್ನಲ್ಲಿ ಕುಳಿತಿದ್ದಾರೆ ಎಂಬುದು ಅವರಿಗೆ ಅರಿವು ಇರಬೇಕು. ಅಮಿತ್ ಶಹಾ ಸಂವಿಧಾನ ಶಿಲ್ಪಿ ಬಗ್ಗೆ ಹಗುರವಾಗಿ ಮಾತನಾಡಿದ್ದನ್ನು ನಾವು ಬಲವಾಗಿ ಖಂಡಿಸುತ್ತೇವೆ. ಅಂಬೇಡ್ಕರ್ ಕೇವಲ ದಲಿತರಿಗಷ್ಟೇ ಸಿಮೀತಗೊಂಡ ವ್ಯಕ್ತಿ ಅಲ್ಲ. ಅವರೊಬ್ಬ ಮಹಾನ್ ಶಕ್ತಿ ಆಗಿದ್ದಾರೆ. ಅಂಬೇಡ್ಕರ್ ಬಗ್ಗೆ ಯಾವುದೇ ಮಠಾಧೀಶರಾಗಲಿ, ಎಂತಹ ಸಚಿವರೇ ಆಗಲಿ ಯಾರೇ ಆಗಲಿ ಹಗುರವಾಗಿ ಮಾತನಾಡಿದರೆ, ಅವಹೇಳನಕಾರಿಯಾಗಿ ಹೇಳಿಕೆ ನೀಡಿದರೆ ದೇಶದಲ್ಲಿ ಮತ್ತೊಮ್ಮೆ ಕೋರೆಗಾಂವ ಘಟನೆ ನಡೆದೀತು ಎಂದು ಆಕ್ರೋಶದಿಂದ ಹೇಳಿದರು. ಮುಖಂಡ ಪಿ. ಎಸ್. ಮಾಸ್ತಿ ಮಾತನಾಡಿದರು. ಅಮಿತ್ ಶಹಾ ವಿರುದ್ಧ ಧಿ:ಕ್ಕಾರ ಘೋಷಣೆ ಹಾಗೂ ಅಂಬೇಡ್ಕರ್ ಪರ ಜಯ ಘೋಷಣೆಗಳನ್ನು ಪ್ರತಿಭಟನಾಕಾರರು ಕೂಗಿದರು. ಪುರಸಭೆ ಮಾಜಿ ಅಧ್ಯಕ್ಷ ಹನುಮಂತ ರೋಡನ್ನವರ, ಹಾಲಿ ಸದಸ್ಯ ಶೆಟ್ಟೆಪ್ಪ ಸುಣಗಾರ, ಮಾಜಿ ಸದಸ್ಯರಾದ ಗೌತಮ ರೋಡಕರ, ರಾಜೇಸಾಬ ನಗಾರ್ಜಿ, ದಯಾನಂದ ಕಾಳೆ, ಸಿದ್ದು ದೊಡಮನಿ, ಲಕ್ಷ್ಮಣ ಮಾಸ್ತಿ, ಸದಾಶಿವ ಸಿಂಗೆ, ಗೋಪಾಲ ಸಿಂಗೆ, ಸಂಜು ಹಾಡಕರ, ಮಂಜುನಾಥ ಸರಿಕರ ಮತ್ತಿತರರು ಉಪಸ್ಥಿತರಿದ್ದರು.



ಬನಹಟ್ಟಿಯ ಪ್ರತಿಷ್ಠಿತ ಕಾಡಸಿದ್ಧೇಶ್ವರ ಪಟ್ಟಣ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಆಯ್ಕೆಯಾದ ಸುರೇಶ ಅಬಕಾರ, ನಿರ್ದೇಶಕರಾದ ಓಂಪ್ರಕಾಶ ಕಾಬ್ರಾ ಮತ್ತು ಹಟಗಾರ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ಆಯ್ಕೆಯಾದ ರಾಜು ಜಾಲಿಗಿಡದ ಅವರನ್ನು ಸ್ಥಳೀಯ ಗಣ್ಯರು ಸನ್ಮಾನಿಸಿದರು. ಬಸವಂತ ಜಾಡಗೌಡ, ರವಿ ಕರಲಟ್ಟಿ, ಮಲ್ಲಿಕಾರ್ಜುನ ಬಾಣಕಾರ, ಮಲ್ಲಪ್ಪ ಹೂಲಿ, ಶಾಂತೇಶ ಬಳಿಗಾರ, ಚಿದಾನಂದ ಮಟ್ಟಿಕಲ್ಲಿ, ಶೀಲವಂತ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಗ್ರಾಮ ಪಂಚಾಯತ್ ಗ್ರಂಥಾಲಯ ಮೇಲ್ವಿಚಾರಕರ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರ

## ಗ್ರಂಥಾಲಯಗಳು ಸ್ಥಳೀಯ ಶಿಕ್ಷಣ ಕೇಂದ್ರಗಳಾಗಿ ಕಾರ್ಯನಿರ್ವಹಿಸಬೇಕು: ನಲಿನ್ ಅತುಲ್



**ಕೊಪ್ಪಳ :** ಗ್ರಾಮೀಣ ಭಾಗದ ಮಾನವ ಸಂಪನ್ಮೂಲಗಳ ಅಭಿವೃದ್ಧಿಪಡಿಸಲು ಗ್ರಂಥಾಲಯಗಳು ಸ್ಥಳೀಯ ಶಿಕ್ಷಣ ಕೇಂದ್ರಗಳಾಗಿ ಕಾರ್ಯನಿರ್ವಹಿಸಬೇಕು ಎಂದು ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಗುರುವಾರ ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಜಿಲ್ಲಾ ಪಂಚಾಯತ್, ಹೆಚ್.ಟಿ ಪಾರೇಖ್ ಫೌಂಡೇಶನ್ ಹಾಗೂ ಕಲಿಕೆ–ಟಾಟಾ ಟ್ರಸ್ಟ್‌ನ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಗ್ರಾಮ ಪಂಚಾಯತ್ ಗ್ರಂಥಾಲಯ ಮೇಲ್ವಿಚಾರಕರ ಸಾಮರ್ಥ್ಯ ಭಿವೃದ್ಧಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕದಲ್ಲಿ ಗ್ರಂಥಾಲಯಗಳ ಕಾರ್ಯ ಚಟುವಟಿಕೆಗಳು ಸಕ್ರಿಯವಾಗಿ ನಡೆಯುತ್ತಿದ್ದು, ಕಳೆದ ವರ್ಷ ರಾಷ್ಟ್ರ ಪ್ರಶಸ್ತಿ ಲಭಿಸಿದೆ. ಕೇರಳದ ಬಳಿಕ ಅತೀ ಹೆಚ್ಚು ಗ್ರಂಥಾಲಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿರುವ ನಮ್ಮ ಕರ್ನಾಟಕ ರಾಜ್ಯವು ಸದ್ಯ ದೇಶದಲ್ಲಿ 2ನೇ ಸ್ಥಾನದಲ್ಲಿದೆ. ಇಂತಹ ಕಾರ್ಯ ಚಟುವಟಿಕೆಗಳು ಕಲ್ಯಾಣ ಕರ್ನಾಟಕ ಭಾಗದಿಂದ ವಿಶೇಷವಾಗಿ ಕೊಪ್ಪಳ ಜಿಲ್ಲೆಯಿಂದಲೇ ಮೊದಲು ಪ್ರಾರಂಭವಾಗಿವೆ. ಮೊದಲು ಸಾರ್ವಜನಿಕ ಗ್ರಂಥಾಲಯಗಳಲ್ಲಿ ಸಣ್ಣ ಮಕ್ಕಳಿಗಾಗಿ ಪುಸ್ತಕಗಳಿಲ್ಲದಕಾರಣಸಮಸ್ಯೆಯಾಗುತ್ತಿತ್ತು. ಆಗ ಕೊಪ್ಪಳ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದ 'ಪುಸ್ತಕ ಜೋಳಿಗೆ' ಕಾರ್ಯಕ್ರಮವು ಮಾದರಿಯಾಗಿದೆ ಎಂದರು.

ಗ್ರಂಥಾಲಯಗಳಲ್ಲಿ ಮೊದಲು ಎಷ್ಟು ಪುಸ್ತಕಗಳಿಗೆ ಅವುಗಳನ್ನು ಓದಲು ಯಾರು ಕೊಂಡೊಯ್ಯಿದಿದ್ದಾರೆಮತ್ತುಮರಳಿಸಿದ್ದಾರೆ ಎಂಬ ಮಾಹಿತಿಯಷ್ಟೇ ಸಿಗುತ್ತಿತ್ತು. ನಂತರ ಮಕ್ಕಳ ಸ್ನೇಹಿ ಗ್ರಂಥಾಲಯ, ಡಿಜಿಟಲ್ ಗ್ರಂಥಾಲಯ, ಅರಿವು ಕೇಂದ್ರಗಳಾಗಿ ಗ್ರಂಥಾಲಯಗಳುಕಾರ್ಯನಿರ್ವಹಿಸುತ್ತಿವೆ. ಮುಂದಿನ ದಿನಮಾನಗಳಲ್ಲಿ ಕೌಶಲ್ಯ ಕೇಂದ್ರಗಳಾಗಲಿವೆ. ಶಾಲೆಯಲ್ಲಿ ಓದಲು ಪಠ್ಯ ಪುಸ್ತಕಗಳಿಗೆ ಮಾತ್ರ ಸಿಮಿತವಾಗುತ್ತೇವೆ. ಆದರೆ, ಗ್ರಂಥಾಲಯಕ್ಕೆ ಬಂದರೆ ಯಾವುದೇ ನಿರ್ಧಿಷ್ಟವಿರುವುದಿಲ್ಲ. ಅಲ್ಲಿ ವಿವಿಧ ಬಗೆಗೆ ಪುಸ್ತಕಗಳು ನಮಗೆ ಓದಲು ಸಿಗುತ್ತವೆ ಎಂದು ತಿಳಿಸಿದರು.

ಕೊಪ್ಪಳ ಜಿಲ್ಲೆಯ ಹಿರೇಬೆಣಕಲ್‌ನ ಬೆಟ್ಟವು ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದು, ಇದರ ಬಗ್ಗೆ ಹಲವಾರು ಲೇಖಕರು ಪುಸ್ತಕಗಳನ್ನು ಬರೆದಿದ್ದಾರೆ. ಇಂತಹ ಪುಸ್ತಕಗಳ ಜೊತೆಗೆ ಅಂಜನಾದ್ರಿ, ಕಿನ್ನಾಳ ಕಲೆ, ಭಾಗ್ಯನಗರ ಸೀರೆ ಹಾಗೂ ಇತರ ಐತಿಹಾಸಿಕ ಸ್ಥಳಗಳು ಸೇರಿದಂತೆ ಕೊಪ್ಪಳ ಜಿಲ್ಲೆಯ ಇತಿಹಾಸ, ಸಂಸ್ಕೃತಿಯ ವಿವರ ಒಳಗೊಂಡಂತಹ ಪುಸ್ತಕಗಳನ್ನು ಸಹ ಗ್ರಂಥಾಲಯಗಳಲ್ಲಿ ಸಂಗ್ರಹಿಸಿಡಬೇಕು. ಇದರ ಜೊತೆಗೆ ಪಾರಂಪರಿಕ ಕಲೆಗಳ ಬಗ್ಗೆ ಪ್ರಾಥಮಿಕ ಮಾಹಿತಿ ಮತ್ತು ಪಾರಂಪರಿಕ ಆಹಾರಗಳ ವಿಧಾನ ಮಾಹಿತಿಯುಳ್ಳ ಪುಸ್ತಕಗಳ ಸಂಗ್ರಹಕ್ಕೂ ಕ್ರಮ ವಹಿಸಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಅವರು ಮಾತನಾಡಿ, ಗ್ರಂಥಾಲಯವು ಗ್ರಾಮೀಣ ಭಾಗದಲ್ಲಿ ಸಾಮಾಜಿಕ ಬದಲಾವಣೆ ತರಲು ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿರುವ ಸಂಸ್ಥೆಯಾಗಿದೆ. ಗ್ರಾ.ಪಂಜೊತೆಗೆಇತರಗ್ರಾಮೀಣಭಾಗಗಳಲ್ಲಿ 155 ಕಡೆ ಗ್ರಾಮೀಣ ಗ್ರಂಥಾಲಯಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆಗಳ ಅಭ್ಯಾಸಕ್ಕಾಗಿ ಬಹಳಷ್ಟು ಯುವ ಜನರು ಗ್ರಂಥಾಲಗಳನ್ನು ಉಪಯೋಗಿಸಿಕೊಳ್ಳುತ್ತಿದ್ದು, ಇತ್ತೀಚೆಗೆ ಕೊಪ್ಪಳ ಜಿಲ್ಲೆಯಲ್ಲಿ ಒಬ್ಬರು ಪಿಡಿಓ ಮತ್ತೊಬ್ಬರು ಪಿ.ಎಸ್.ಐ ಆಗಿದ್ದಾರೆ. ಇದು ಹೆಮ್ಮೆಯ ವಿಚಾರವಾಗಿದೆ. ಜಿಲ್ಲೆಯ ಎಲ್ಲಾ ಗ್ರಂಥಾಲಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಬೇಕಾಗುವ ಪುಸ್ತಗಳಿರಬೇಕು. ಈ ಬಗ್ಗೆ ಪುಸ್ತಕಗಳ ಬೇಡಿಕೆಯನ್ನು ಆಯಾ ಗ್ರಾ.ಪಂ ಮೂಲಕ ಕಳುಹಿಸಿ ಕೊಟ್ಟರೆ, ಅಂತಹ ಪುಸ್ತಕಗಳನ್ನು ಕಳುಹಿಸಿಕೊಡಲಾಗುವುದು. ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಓದಲು ಗ್ರಂಥಾಲಯದಲ್ಲಿ ಪ್ರತ್ಯೇಕ ವ್ಯವಸ್ಥೆಯನ್ನು ಕಲ್ಪಿಸಲು ಸಹ ಕ್ರಮ ಕೈಗೊಳ್ಳಲಾಗುವದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಲಿಕಾ–ಟಾಟಾ ಟ್ರಸ್ಟ್‌ನ ಕೊಪಳ ಶಿಕ್ಷಣ ಕಾರ್ಯಕ್ರಮ ಅಧಿಕಾರಿ ಶಿವುಕುಮಾರ ಯಾದವ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕಲಿಕಾ–ಟಾಟಾ ಟ್ರಸ್ಟ್‌ನ ಕಾರ್ಯಕ್ರಮ ಸಂಯೋಜಕಕಲ್ಲಪ್ಪತಳವಾರಕಾರ್ಯಕ್ರಮ ನಿರೂಪಿಸಿದರು. ಕಾರ್ಯಾಗಾರದಲ್ಲಿ ಕೊಪ್ಪಳ ಜಿಲ್ಲೆಯ ಗ್ರಂಥಾಲಯ ಮೇಲ್ವಿಚಾರಕರು ಭಾಗವಹಿಸಿದ್ದರು.

# ಬಿಜೆಪಿಯ ಅಧಿಕಾರದ ಲಾಲಸೆಗೆ ಈ ದುರ್ವತನೆಗಳೇ ಸಾಕ್ಷಿ: ಜ್ಯೋತಿ



**ಕೊಪ್ಪಳ :** ಕೇಂದ್ರದ ಗೃಹ ಮಂತ್ರಿಗಳು ತಾವು ಎಂತಹ ಅಪರಾಧದ ಹಿನ್ನೆಲೆಯಿಂದ ಬಂದಿದ್ದಾರೆ ಎಂಬುದು ಜಗತ್ತಿಗೆ ಗೊತ್ತಿದೆ, ಇನ್ನು ರಾಜ್ಯದ ಸಿಟಿ ರವಿಯ ವರ್ತನೆಯೂ ಜಗತ್ತಿಗೆ ಗೊತ್ತಿರುವ ವಿಷಯ ಇವರ ಅಧಿಕಾರದ ಲಾಲಸೆಗೆ ಈ ರೀತಿಯ ಮಾತುಗಳು ಬರುತ್ತಿವೆ ಎಂದು ಕಾಂಗ್ರೆಸ್ ಮುಖಂಡರು, ಗ್ಯಾರಂಟಿ ಸಮಿತಿ ಸದಸ್ಯರಾದ ಜ್ಯೋತಿ ಎಂ. ಗೊಂಡಬಾಳ ಹೇಳಿಕೆ ನೀಡಿದ್ದಾರೆ.

ದೇಶದ ಸಂವಿಧಾನವನ್ನು ರಚಿಸಿ ಸರ್ವರಿಗೂ ಬದುಕುವ ಹಕ್ಕು ಕೊಟ್ಟ ಧೀಮಂತ ನಾಯಕ ಬಾಬಾಸಾಹೇಬರ ಹೆಸರನ್ನು ಹೇಳಿದರೆ ಗೃಹ ಮಂತ್ರಿ ಎನಿಸಿಕೊಂಡ ಪುಣ್ಯಾತ್ಮನಿಗೆ ಶೋಕಿ ಅನಿಸುತ್ತಿದೆ, ತಾವು ಶೋಕಿಗಾಗಿ ಶ್ರೀರಾಮನ ಹೆಸರನ್ನು, ಪರಮ ಭಕ್ತ ಹನುಮನ ಹೆಸರನ್ನು ಹೇಳಿಕೊಂಡು ತಿರುಗಿದಂತೆ ಭಾವಿಸಿರುವ ಅಮಿತ್ ಶಾ ಅವರನ್ನು ಕೂಡಲೇ ಸರಕಾರ ವಜಾಗೊಳಿಸಬೇಕು ಇಲ್ಲವಾದರೆ ಅವರ ಹೇಳಿಕೆಯನ್ನು ಕೇಂದ್ರ ಸರಕಾರದ ಬಿಜೆಪಿಯ ಹೇಳಿಕೆ ಎಂದೇ ಪರಿಭಾವಿಸಬೇಕಾಗುತ್ತದೆ ಎಂದು ಕಿಡಿಕಾರಿದ್ದಾರೆ.

ಇನ್ನು ರಾಜ್ಯದ ವಿಧಾನ ಪರಿಷತ್ ಸದಸ್ಯ ಸಿಟಿ ರವಿ ಎಂಬಾತ ಹಗಲಲ್ಲೂ ನಶೆಯಲ್ಲಿ ಇದ್ದ ರೀತಿಯಾಗಿ ಮಾತನಾಡಿ, ಹೆಣ್ಣುಮಗಳ ಬಗ್ಗೆ ಅತ್ಯಂತ ವಿಷಾಧಕರ ಮಾತನ್ನು ಆಡಿದ್ದು ಅಲ್ಲದೇ ಬಿಜೆಪಿ ಮುಖಂಡರು ಸಿಟಿ ರವಿ ಪರವಾಗಿ ಬೀದಿಗಳಿದು ಪ್ರತಿಭಟನೆ ಮಾಡುತ್ತಾರೆ ಅಂದರೆ ಅವರಿಗೆ ಸಂವಿಧಾನದ ಬಗ್ಗೆ, ಹೆಣ್ಣುಮಕ್ಕಳ ಬಗ್ಗೆ ಮತ್ತು ಶೋಷಿತರ ಪರವಾಗಿ ಇರುವ ಸರಕಾರಗಳ ಬಗ್ಗೆ ಇರುವ ಅಸಹನೀಯದ ಭಾಗವಾಗಿ ಈ ರೀತಿಯ ಹೇಳಿಕೆಗಳು ಮತ್ತು ಮಾತುಗಳು ಬರುತ್ತವೆ ಎಂದು ಜ್ಯೋತಿ ಎಂ. ಗೊಂಡಬಾಳ ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವಮಾನ ಸಹಿಸಲ್ಲ: ತಾಹೇರ್ ಹುಸೇನ್ ಎಚ್ಚರಿಕೆ



**ಬೀದರ :** ಅಂಬೇಡ್ಕರ್ ರವರ ಹೆಸರು ಹೆಚ್ಚು ಹೆಚ್ಚು ಬಾರಿ ಹೇಳುವುದು ವ್ಯಸನವಾಗಿದೆ ಎಂದು ಸಂವಿಧಾನದ ಕರ್ತೃ ಬಾಬಾ ಸಾಹೇಬ್ ಅಂಬೇಡ್ಕರ್ ರನ್ನು ನಿಂದಿಸುವ ಮೂಲಕ ಗೃಹ ಮಂತ್ರಿ ಅಮಿತ್ ಶಾ ತನ್ನ ಫ್ಯಾಸಿಟ್ಸ್ ಮನಸ್ಥಿತಿಯನ್ನು ಬಹಿರಂಗ ಪಡಿಸಿದ್ದಾರೆಂದು ವೆಲ್ಫೇರ್ ಪಾರ್ಟಿ ಕರ್ನಾಟಕ ರಾಜ್ಯ ಅಧ್ಯಕ್ಷ ಅಡ್ವೋಕೇಟ್ ತಾಹೇರ್ ಹುಸೇನ್ ಆಕ್ರೋಶ ವ್ಯಕ್ತ ಪಡಿಸಿದ್ದಾರೆ. ಅವರು ಬೀದರ ನಗರದಲ್ಲಿ ಅಮಿತ ಶಾ ವಿರುದ್ಧ ನಡೆದ ಒಂದು ಪ್ರತಿಭಟನೆಯಲ್ಲಿ ಮಾತನಾಡುತ್ತ ಗ್ರಹ ಮಂತ್ರಿಗಳ ಈ ಹೇಳಿಕೆ ಅತ್ಯಂತ ಖಂಡನೀಯ, ಬಾಬಾ ಸಾಹೇಬ್ ಅಂಬೇಡ್ಕರ್ ಹೆಸರು ಹೇಳುವುದು ಭಾರತೀಯರೆಲ್ಲರಿಗೆ ಹೆಮ್ಮೆಯ ವಿಚಾರವಾಗಿದೆ. ಅವರು ಈ ದೇಶಕ್ಕೆ ಒಂದು ಮಾದರಿ ಸಂವಿಧಾನ ರೂಪಿಸಿದವರು ಹಿಂದುಳಿದ, ಅಲ್ಪಸಂಖ್ಯಾತರ ಧ್ವನಿ ಆಗಿದವರು ಅವರ ಬಗ್ಗೆ ಇಷ್ಟು ಕೀಳು ಭಾವನೆ ಇಟ್ಟುಕೊಳ್ಳುವುದು ಈ ದೇಶದ ಗ್ರಹ ಮಂತ್ರಿಗೆ ಶೋಭೆ ತರುವುದಿಲ್ಲ ಎಂದರು.

ಬಾಬಾ ಸಾಹೇಬ್ ಹೆಸರನ್ನು ಕೇಳಲು ಕೋಮುವ್ಯಸನಿಗಳಿಗೆ ಕರ್ಕಶವಾಗಬಹುದು. ಆದರೆ ಇಲ್ಲಿನ ದಲಿತರ ಹಿಂದುಳಿದವರ, ದುರ್ಬಲರ ಹಕ್ಕುಗಳಿಗೆ ಹೋರಾಡಿದ ಮಹನೀಯರಾದ ಅಂಬೇಡ್ಕರ್ ರವರ ಸೇವೆ ಸ್ಮರಣೀಯ. ಆ ಹೆಸರು ನಾವು ಎಂದಿಗೂ ಸ್ಮರಿಸಿ ಹೇಳುತ್ತಿರುವುದು ನಿಮಗೆ ವ್ಯಸನದಂತೆ ಕಂಡರೆ ಅದು ನಿಮ್ಮ ಮಾನಸಿಕ ಸಮಸ್ಯೆಯಾಗಿದೆ. ಆ ಹೆಸರನ್ನು ಭಾರತೀಯರು ಎಂದೆಂದಿಗೂ ಹೇಳುತ್ತಿರುತ್ತಾರೆ.

ಬಡವರ ದಲಿತರ ದೀನ ದುರ್ಬಲರ ಹಕ್ಕುಗಳಿಗೆ ಹೋರಾಡಿದ ಮಹಾನ ವ್ಯಕ್ತಿಯನ್ನು ನಿಂದಿಸುವ ಮೂಲಕ ಇಡೀ ದೇಶದ ನಾಗರಿಕರ ಮನಸಿಗೆ ಘಾಸಿಯುಂಟು ಮಾಡಿರುವ ಗ್ರಹ ಮಂತ್ರಿಗಳು ಕೂಡಲೇ ಕ್ಷಮೆಯಾಚನೆ ಮಾಡಬೇಕು ಮತ್ತು ತಮ್ಮ ಶಬ್ದಗಳನ್ನು ವಾಪಾಸ್ ಪಡೆಯಬೇಕು, ಇದನ್ನು ಒಕ್ಕೊರಲಿನಿಂದ ಎಲ್ಲರೂ ಖಂಡಿಸಬೇಕೆಂದು ಅವರು ಅಗ್ರಹಿಸಿದ್ದಾರೆ.

# ಮತದಾರರ ಪಟ್ಟಿ ಪರಿಷ್ಕೃತ ಮಾಹಿತಿ ನಿಖರವಾಗಿರಲಿ: ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಕೆ.ಪಿ ಮೋಹನ್ ರಾಜ್



**ಕೊಪ್ಪಳ :** ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ತೆಗೆದು ಹಾಕುವುದು ಮತ್ತು ತಿದ್ದುಪಡಿಯ ಮಾಹಿತಿಯನ್ನು ನಿಖರವಾಗಿರಬೇಕೆಂದು ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಮತದಾರರ ಪಟ್ಟಿ ವೀಕ್ಷಕರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ ಮೋಹನ್ ರಾಜ್ ಹೇಳಿದರು.

ಅವರು ಶುಕ್ರವಾರ ಕೊಪ್ಪಳ ಜಿಲ್ಲಾ ಪಂಚಾಯತ ಕಛೇರಿ ಸಭಾಂಗಣದಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮತ್ತು ತಿದ್ದುಪಡಿಯ ಕುರಿತು ಮಾಹಿತಿ ಪಡೆಯಲುಅಧಿಕಾರಿಗಳಿಗೆಕರೆದಸಭೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದರು.

ಮತದಾರರ ಪಟ್ಟಿಯಲ್ಲಿ ಜನರು ತಮ್ಮ ಹೆಸರು ಸೇರ್ಪಡೆ, ಸ್ಥಳ ಬದಲಾವಣೆ ಮತ್ತು ತಿದ್ದುಪಡಿ ಮಾಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿದಾಗ ಅವುಗಳನ್ನು ಸರಿಯಾಗಿ ಪರಿಶೀಲನೆ ಮಾಡಬೇಕು. ಪ್ರತಿ ತಾಲ್ಲೂಕಿನಲ್ಲಿ ಎಷ್ಟು ಜನರು ಬೇರೆ ಕಡೆ ಹೋಗಿದ್ದಾರೆ.

ಹೊಸದಾಗಿ ಎಷ್ಟು ಜನ ಸೇರ್ಪಡೆಯಾದರು ಎಂಬ ಮಾಹಿತಿಯನ್ನು ತಮ್ಮಲ್ಲಿ ಇರಬೇಕೆಂದು ಹೇಳಿದರು.

ತಾವು ಈ ಕೆಲಸವನ್ನು ಸರಿಯಾಗಿ ಮಾಡಿದ್ದಿರಾ ಎಂಬುದಕ್ಕೆ ನನಗೆ ಸ್ಯಾಂಪಲ್ ಬೇಕು. ತಾವು ನೀಡಿದ ಮಾಹಿತಿ ಸರಿಯಾಗಿ ಇದೆಯಾ ಇಲ್ಲಾ ಎಂದು ಮನೆಗಳಿಗೆ ಭೇಟಿ ನೀಡಿದಾಗನನಗೆತಿಳಿಯುತ್ತದೆ.ಮತದಾರರ ಪಟ್ಟಿಯ ಕುರಿತು ಮಾಹಿತಿ ಪಡೆಯಲು ಇದು ನನ್ನ ಎರಡನೆ ಭೇಟಿಯಾಗಿದೆ.

ಬಿ.ಎಲ್.ಓ ಗಳು ಚುನಾವಣೆ ಬಂದಾಗ ಮಾತ್ರ ಸರಿಯಾಗಿ ಕೆಲಸ ಮಾಡುತ್ತಾರೆ ಹಾಗಾಗಿಆಯಾತಾಲೂಕಿನತಹಶೀಲ್ದಾರರು ಮತದಾರರಪಟ್ಟಿಯ ನಿಖರವಾದ ಮಾಹಿತಿ ತಮಗೆ ತಿಳಿದಿರಬೇಕೆಂದು ಹೇಳಿದರು.

ಈ ಸಭೆಯಲ್ಲಿ ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಚುನಾವಣಾ ತಹಶಿಲ್ದಾರ ನಾಗರಾಜ್ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕಿನ ತಹಶಿಲ್ದಾರರು ಉಪಸ್ಥಿತರಿದ್ದರು.

ಸಭೆಯ ನಂತರ ಜಿಲ್ಲೆಯ ಯಲಬುರ್ಗಾ ವಿಧಾನಸಭಾಕ್ಷೇತ್ರದಕುಕನೂರುತಾಲ್ಲೂಕಿನ ತಳಕಲ್ ಗ್ರಾಮಕ್ಕೆ ಕ್ಷೇತ್ರ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಮತದಾರರ ಪಟ್ಟಿಯಲ್ಲಿ ಹೊಸ ಮತದಾರರ ಸೇರ್ಪಡೆ, ತಿದ್ದುಪಡಿ, ಮೃತರ ಹೆಸರು ಮತದಾರರ ಪಟ್ಟಿಯಿಂದ ತೆಗೆದು ಹಾಕಿರುವ ಬಗ್ಗೆ ಖುದ್ದಾಗಿ ಪರಿಶೀಲಿಸಿ, ಮತದಾರರ ಪಟ್ಟಿಯ ಮಹಿತಿಯನ್ನು ಸ್ಪಷ್ಟ ಹಾಗೂ ನಿಖರವಾಗಿರುವಂತೆ ನೋಡಿಕೊಳ್ಳಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

# ರಾಷ್ಟ್ರೀಯ ಜೀವನೋಪಾಯ ಅಭಿಯಾನ;"ಅಕ್ಕ ಕೆಫೆ" ಉದ್ಘಾಟನಾ ಸಮಾರಂಭ

## ರಾಜ್ಯದಲ್ಲಿ 50 "ಅಕ್ಕ ಕೆಫೆ" ಶೀಘ್ರದಲ್ಲಿ ಪ್ರಾರಂಭ: ಸಚಿವ ಶರಣ ಪ್ರಕಾಶ್ ಪಾಟೀಲ




**ಬೆಳಗಾವಿ :** ಮಹಿಳಾ ಸ್ವ–ಸಹಾಯ ಸಂಘಗಳಿಗೆ ಆದಾಯ ತರುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ನಿರ್ದೇಶನದಂತೆ ರಾಷ್ಟ್ರೀಯ ಜೀವನೋಪಾಯ ಅಭಿಯಾನ ಅಡಿಯಲ್ಲಿ ರಾಜ್ಯದ ವಿವಿಧ ಜಿಲ್ಲೆ ಹಾಗೂ ತಾಲೂಕುಗಳ ವ್ಯಾಪ್ತಿಯಲ್ಲಿ 50 ಅಕ್ಕ ಕೆಫೆಗಳನ್ನು ಪ್ರಾರಂಭಿಸಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಚಿವ ಶರಣ ಪ್ರಕಾಶ ಪಾಟೀಲ ಅವರು ತಿಳಿಸಿದರು.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಷ್ಟ್ರೀಯ ಜೀವನೋಪಾಯ ಅಭಿಯಾನ ಅಡಿಯಲ್ಲಿ ಗುರುವಾರ (ಡಿ.19) ಜಿಲ್ಲಾ ಪಂಚಾಯತ ಆವರಣದಲ್ಲಿ ನೂತನವಾಗಿ ನಿರ್ಮಿಸಲಾದ "ಅಕ್ಕ ಕೆಫೆ" ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರು ಹೊರತುಪಡಿಸಿ ಬೆಳಗಾವಿಯಲ್ಲಿ "ಅಕ್ಕ ಕೆಫೆ" ಕ್ಯಾಂಟೀನ್ ಪ್ರಾರಂಭಿಸಲಾಗಿದೆ. ಸ್ವ–ಸಹಾಯ ಸಂಘಗಳಿಗೆ ಆದಾಯ ಒದಗಿಸುವ ವಿನೂತನ ಯೋಜನೆ ಇದಾಗಿದೆ. ಇಡೀ ರಾಜ್ಯದಲ್ಲಿ ಮೂರು "ಅಕ್ಕ ಕೆಫೆ" ಪ್ರಾರಂಭದಲ್ಲಿವೆ. ಬರುವಂತಹ ದಿನಗಳಲ್ಲಿ ರಾಜ್ಯದ ವಿವಿಧೆಡೆ 50 ಅಕ್ಕ ಕೆಫೆ ಪ್ರಾರಂಭಿಸಲಾಗುವುದು. ಕೆಫೆ ನಿರ್ವಹಣೆಗಾಗಿ ಸುಮಾರು 15 ಲಕ್ಷ ರೂಪಾಯಿಗಳ ಸಹಾಯ ಧನ ನೀಡಲಾಗುತ್ತಿದೆ ಎಂದು ಹೇಳಿದರು.

ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಮುಖ್ಯ ವಾಹಿನಿಗೆ ಬರಬೇಕು ಎಂಬ ಉದ್ದೇಶದಿಂದ ಸರ್ಕಾರ ಸ್ವಾವಲಂಬಿ ಯೋಜನೆಗಳನ್ನು ಜಾರಿಗೆ ತರುತ್ತಿದೆ. ಇಂತಹ ವಿನೂತನ ಯೋಜನೆಗಳನ್ನು ಬಳಕೆ ಮಾಡಿಕೊಂಡು ಮಹಿಳೆಯರು ಸ್ವಾವಲಂಬಿಯಾಗಿ ಬದುಕಬೇಕು ಎಂದು ಸಚಿವ ಶರಣ ಪ್ರಕಾಶ ಪಾಟೀಲ ಅವರು ತಿಳಿಸಿದರು.

ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಆವರಣದಲ್ಲಿ ಸಂಜೀವಿನಿ ಸ್ವ–ಸಹಾಯ ಸಂಘಗಳ ತಯಾರಿಸಿದ ಉತ್ಪನ್ನಗಳನ್ನು ಮಾರಾಟ ಹಾಗೂ ಪ್ರದರ್ಶನಕ್ಕಾಗಿ "ಅವಸರ" ಮಳಿಗೆ ಸ್ಥಾಪಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ತಿಳಿಸಿದರು.

**"ಅಕ್ಕ ಕೆಫೆ" ಆಹಾರ ಗುಣಮಟ್ಟ–ಶುಚಿ–ರುಚಿಗೆ ಮೆಚ್ಚುಗೆ:**

ಇದಕ್ಕೂ ಮುಂಚೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ, ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವ ಶರಣ ಪ್ರಕಾಶ ಪಾಟೀಲ, ಶಾಸಕ ಆಸೀಫ್ (ರಾಜು) ಸೇಠ ಅವರು "ಅಕ್ಕ ಕೆಫೆ"ಯಲ್ಲಿ ತಯಾರಿಸಲಾದ ಅಲ್ಪೋಪಹಾರ ಸೇವಿಸಿ, ಆಹಾರ ಗುಣಮಟ್ಟವನ್ನು ಪರಿಶೀಲಿಸಿದರು. "ಅಕ್ಕ ಕೆಫೆ" ಮಹಿಳಾ ಸಿಬ್ಬಂದಿಗಳು ತಯಾರಿಸಿದ ಆಹಾರ ಗುಣಮಟ್ಟ ಹಾಗೂ ಶುಚಿ–ರುಚಿಗೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು ಮೆಚ್ಚಿಗೆ ವ್ಯಕ್ತಪಡಿಸಿದರು.

ಜಿ.ಪಂ ಹೆಚ್ಚುವರಿ ಕೊಠಡಿ ಉದ್ಘಾಟನೆ: ಸಚಿವೆ ಲಕ್ಷ್ಮೀ ಹೆಬ್ಬಾಳಕರ, ಸಚಿವ ಶರಣ ಪ್ರಕಾಶ್ ಪಾಟೀಲ ಅವರು ಜಿಲ್ಲಾ ಪಂಚಾಯತ್ ಕಟ್ಟಡ ನಿರ್ಮಾಣ ಮತ್ತು ಕಟ್ಟಡ ನಿರ್ವಹಣೆ ಯೋಜನೆಯಡಿ ದಾಖಲೆಗಳ ಕ್ರೋಡಿಕರಣಕ್ಕಾಗಿ ಹೆಚ್ಚುವರಿಯಾಗಿ ನಿರ್ಮಿಸಲಾದ ಜಿಲ್ಲಾ ಪಂಚಾಯತ್ 2ನೇ ಮಹಡಿಯಲ್ಲಿನ ನೂತನ ಕೊಠಡಿಯನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ ಖರ್ಗೆ, ಬೆಳಗಾವಿ ಉತ್ತರ ವಿಧಾನಸಭಾ ಮತಕ್ಷೇತ್ರದ ಶಾಸಕ ಆಸೀಫ್ (ರಾಜು) ಸೇಠ, ಶಾಸಕ ಶರತ್ ಕುಮಾರ ಬಚ್ಚೆಗೌಡ,

ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಕಾಧಿಕಾರಿ ರಾಹುಲ್ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಭೀಮಾಶಂಕರ ಗುಳೇದ, ಐಎಎಸ್ ಪ್ರೊಬೇಷನರಿ ಅಧಿಕಾರಿ ದಿನೇಶ್ ಕುಮಾರ ಮೀನಾ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಸದನದಲ್ಲಿ ಸಚಿವ ಕೃಷ್ಣ ಬೈರೇಗೌಡ ಮಾಹಿತಿ

## ಆದ್ಯತೆ ಮೇರೆಗೆ ಭದ್ರಾ ಮೇಲ್ದಂಡೆ ಯೋಜನೆ ಮೊದಲ ಹಂತ ಪೂರ್ಣ

**ಬೆಳಗಾವಿ ಸುವರ್ಣಸೌಧ :** ಮಧ್ಯ ಕರ್ನಾಟಕ ಭಾಗದ ಬಹುದಿನದ ಬೇಡಿಕೆಯಾದ ಭದ್ರಾ ಮೇಲ್ದಂಡೆ ಯೋಜನೆಯ ಮೊದಲನೆ ಹಂತವನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸುವುದಾಗಿ ಸಚಿವ ಕೃಷ್ಣ ಬೈರೇಗೌಡ ಅವರು ಮಾಹಿತಿ ನೀಡಿದರು.

ಮಂಗಳವಾರ ವಿಧಾನ ಸಭೆಯ ಪ್ರಶ್ನೋತ್ತರ ಕಲಾಪದಲ್ಲಿ ಶಾಸಕ ಎಂ.ಚಂದ್ರಪ್ಪನವರ ಚುಕ್ಕೆ ಗುರುತಿನ ಪ್ರಶ್ನೆಗೆ ಉಪ ಮುಖ್ಯಮಂತ್ರಿಗಳ ಪರವಾಗಿ ಅವರು ಉತ್ತರಿಸಿದರು.

2003ರಲ್ಲಿ ಯೋಜನೆಗೆ ರೂ.2813 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. ನಂತರ 2015 ರಲ್ಲಿ ಯೋಜನೆಯ ಪರಿಷ್ಕೃತ ಮೊತ್ತ ರೂ.12340 ಕೋಟಿಗೆ ಸರ್ಕಾರ ಅನುಮೋದನೆ ನೀಡಿದೆ. 2020 ರಲ್ಲಿ ಪರಿಷ್ಕೃತ ಯೋಜನೆ ಮೊತ್ತ ರೂ.21473.67 ಕೋಟಿಗೆ ಏರಿಕೆಯಾಗಿದೆ. ಇದಕ್ಕೆ ತಕ್ಕಹಾಗೆ ಯೋಜನೆಯ ಮೂಲ ವ್ಯಾಪ್ತಿ ವಿಸ್ತೀರ್ಣ ಹಾಗೂ ಕುಡಿಯುವ ನೀರಿನ ಯೋಜನೆಗಳು ಸಹ ಸೇರ್ಪಡೆಯಾಗಿವೆ. 2027–28ನೇ ಸಾಲಿನ ಮಾರ್ಚ್ ಅಂತ್ಯಕ್ಕೆ ಯೋಜನೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು, ಇನ್ನೂ ರೂ.11,358.54 ಕೋಟಿ ಅನುದಾನ ಬೇಕಾಗುತ್ತದೆ. ಕೇಂದ್ರ ಸರ್ಕಾರ ಆಯವ್ಯಯದಲ್ಲಿ ಘೋಷಿಸಿದಂತೆ ರೂ.5300 ಕೋಟಿ ಅನುದಾನವನ್ನು ಇನ್ನೂ ಬಿಡುಗಡೆ ಮಾಡಿಲ್ಲ. ಅನುದಾನ ಲಭಿಸಿದರೆ ಯೋಜನೆ ಪೂರ್ಣಗೊಳಿಸಲು ಸಹಾಯವಾಗಲಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.

1957 ರಲ್ಲಿ ದಿವಂಗತ ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪನವರು ಮಧ್ಯ ಕರ್ನಾಟಕ ಬರ ಪೀಡಿತ ಜಿಲ್ಲೆಗಳಿಗೆ ನೀರನ್ನು ನೀಡಲು ಮಹತ್ವಾಂಕ್ಷೆ ಭದ್ರಾ ಯೋಜನೆಯ ಬಗ್ಗೆ ಚಿಂತಿಸಿದ್ದರು. 2003ರಲ್ಲಿ ಅನುಮೊದನೆ ನೀಡಿದ ಯೋಜನಾ ವೆಚ್ಚ ಇಂದು 21473.67 ಕೋಟಿಗಳಷ್ಟು ಹೆಚ್ಚಾಗಿದೆ. ಇನ್ನೂ ತಡವಾದರೆ ಎಸ್.ಆರ್. ರೇಟ್ ಏರಿಕೆಯಾಗಿ ಯೋಜನೆ ವೆಚ್ಚವು ಇನ್ನೂ ಹೆಚ್ಚಾಗಲಿದೆ. ಪಕ್ಕದ ತೆಲಂಗಾಣ ರಾಜ್ಯದಲ್ಲಿನ ಸರ್ಕಾರ 5 ವರ್ಷದಲ್ಲಿ ರೂ.1.20 ಲಕ್ಷ ಕೋಟಿ ಖರ್ಚು ಮಾಡಿ 18 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಿದೆ. ರಾಜ್ಯವೂ ಸಹ ಇಂತಹದೇ ಇಚ್ಛಾ ಶಕ್ತಿಯನ್ನು ಪ್ರದರ್ಶಿಸಬೇಕು. ಕೇಂದ್ರ ಸರ್ಕಾರ ಘೋಷಿಸಿದ ಅನುದಾನ ನೀಡಿಲ್ಲ ಎಂದು ನೆಪ ಹೇಳದೆ, ರಾಜ್ಯ ಸರ್ಕಾರವೇ ಅನುದಾನ ನೀಡಿ ಯೋಜನೆ ಪೂರ್ಣಗೊಳಿಸಬೇಕು ಎಂದರು.

# ಪ್ರಜಾಪ್ರಭುತ್ವದ ದೇಗುಲದಲ್ಲಿ ಗೂಂಡಾಗಿರಿ: ಕಾಂಗ್ರೆಸ್ ವಿರುದ್ಧ ಎಸ್.ಟಿ. ಪಾಟೀಲ ಆಕ್ರೋಶ

**ಬಾಗಲಕೋಟೆ :** ತುರ್ತು ಪರಿಸ್ಥಿತಿ ಹೇರಿದ ಕುಖ್ಯಾತಿಯ ಕಾಂಗ್ರೆಸ್ ,ಕರ್ನಾಟಕದಲ್ಲಿ ಇದೀಗ ಪರೋಕ್ಷ ತುರ್ತು ಪರಿಸ್ಥಿತಿ ಹೇರ ಹೊರಟಿದೆ .ಕಾಂಗ್ರೆಸ್ಸಿನ ಈ ಕಾರ್ಯ ಜನವಿರೋಧಿ ,ಪ್ರಜಾಪ್ರಭುತ್ವ ವಿರೋಧಿ ನಡೆಯೆಂದು ಬಾಗಲಕೋಟೆ ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ಶಾಂತಗೌಡ ಪಾಟೀಲರು ತಿಳಿಸಿದ್ದಾರೆ .ಪ್ರಜಾಪ್ರಭುತ್ವ ದೇಗುಲವೆನಿಸಿರುವ ಸುವರ್ಣ ಸೌಧಕ್ಕೆ ಸಚಿವರಾದ ಹೆಬ್ಬಾಳ್ಕರ ರವರ ಹಾಗೂ ಎಮ್ ಎಲ್ ಸಿ ಹಟ್ಟಿಹೊಳಿಯವರ ಆಪ್ತ ಕಾರ್ಯದರ್ಶಿಗಳೇ ಸರಕಾರದಿಂದ ಪ್ರಾಯೋಜಿತ ಗೂಂಡಾಗಳನ್ನು ಕರೆತಂದು ಸಿ. ಟಿ. ರವಿಯವರ ಮೇಲೆ ಹಲ್ಲೆ ನಡೆಸಿದ್ದು ಸರಕಾರದ ವೈಫಲ್ಯ ಎತ್ತಿ ತೋರಿಸುತ್ತೆ .ಇದು ಅತ್ಯಂತ ಖಂಡನಾರ್ಹ .ಇಲ್ಲಿಗೆ ನಿಲ್ಲಿಸದೆ ಹಲ್ಲೆಗೊಳಗಾದ ನಮ್ಮ ಹಿರಿಯ ಶಾಸಕರಾದ ಮಾನ್ಯ ಸಿ ಟಿ ರವಿಯವರನ್ನೇ ಬಂಧಿಸಿದ್ದಾರೆ .ಈ ಮೂಲಕ ರಾಜ್ಯದ ಕಾಂಗ್ರೆಸ್ ಸರಕಾರವು ಪೊಲೀಸ್ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಗೂಂಡಾ ಸಾಮ್ರಾಜ್ಯವನ್ನು ನಿರ್ಮಿಸುತ್ತಿರುವದು ಅಕ್ಷಮ್ಯ ಅಪರಾಧ .


ಸದನದ ಒಳಗಿನ ಘಟನೆಯನ್ನು ಉಲ್ಲೇಖಿಸಿ ದೂರು ಪಡೆದುಕೊಂಡು ರವಿಯವರನ್ನು ಬಂಧಿಸಿದ ಕ್ರಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕುಣಿಕೆ ಬಿಗಿಯುವ ಸರ್ವಾಧಿಕಾರಿ ಧೋರಣೆಯಾಗಿದೆ .ವಿಧಾನಪ–ರಿಷತ್ತಿನ ಘನತೆ ಹಾಗೂ ಅದರ ಸಂವಿಧಾನಿಕ ಶಕ್ತಿಯನ್ನು ಮಣ್ಣುಪಾಲು ಮಾಡ ಹೊರಟಿದೆ ಕಾಂಗ್ರೆಸ್ .ಬಿಜೆಪಿ ಯ ಹಿರಿಯ ನಾಯಕರಾಗಿರುವ ಸಿ ಟಿ ರವಿಯವರು ಕಾಂಗ್ರೆಸ್ಸಿನ ಕರಾಳ ಕೃತ್ಯಗಳನ್ನು ಎಳೆಎಳೆಯಾಗಿ ಬಿಡಿಸಿಡುತ್ತಿರುವದು ,ಬಯಲಿಗೆ ಎಳೆಯುತ್ತಿರು ವ್ಯಕ್ತಿ ಅವರ ಬಂಧನ ಮಾಡಿದರೆ ಬಿಜೆಪಿ ಪಕ್ಷವನ್ನು ದುರ್ಬಲ ಗೊಳಿಸಬಹುದೆಂಬ ಹುನ್ನಾರ ಇದರ ಹಿಂದಿದೆ .ಮಾನ್ಯ ಅಂಬೇಡ್ಕರವ–ರಿಗೆ ಯಾವ ರೀತಿ ಕಾಂಗ್ರೆಸ್ಸಿಗರು ಬದುಕಿದ್ದಾಗಲ್ಲದೆ ಅವರು ತೀರಿದ ಮೇಲೂ ಯಾವ ರೀತಿ ಅನ್ಯಾಯ ಮಾಡಿದರೆಂಬುದನ್ನು ತಿಳಿಸುವಾಗಲೇ ಮಾನ್ಯ ಸಿ ಟಿ ರವಿಯವರ ಮಾತನ್ನು ತಿರುಚಿದ್ದಾರೆ ಕಾಂಗ್ರೆಸ್ಸಿಗರು .ಈ ದೇಶದ ಪ್ರಧಾನಿ ಹಾಗೂ ಗೃಹ ಸಚಿವರ ಹೇಳಿಕೆ ತಿರುಚುವ ಕಾರ್ಯದಲ್ಲಿ ನಿಸ್ಸಿಮರಾಗಿರುವ ಕಾಂಗ್ರೆಸ್ಸಿಗರು ಇಲ್ಲಿ ರವಿಯವರ ಮಾತನ್ನು ತಿರುಚಿ ಸುಳ್ಳು ಪ್ರಕರಣ ದಾಖಲಿಸಿದ್ದಲ್ಲದೆ ,ರಾತ್ರಿಯಿಡಿ ಎಲ್ಲ ಕಾನೂನು ಪರಿಧಿ ಗಳನ್ನೂ ತೂರಿ ರವಿಯವರನ್ನು ಬೆಳಗಿನ ವರೆಗೆ ನಿದ್ರೆ ಮಾಡಲು ಬಿಡದೆ ,ಊಟ ನೀಡದೆ 3 ಜಿಲ್ಲೆಗಳಲ್ಲಿ ಅವರನ್ನು ತಿರುಗಾಡಿಸಿದ್ದು ಈ ಸರಕಾರ ರವಿಯವರನ್ನು ಏನು ಮಾಡ ಹೊರಟಿದೆ ಎಂದು ಭಯವಾಗುತ್ತಿದೆ .

ಕಾರಣ ಸಿ ಟಿ ರವಿಯವರನ್ನು ಬೇಷರತ್ತಾಗಿ ಬಿಡುಗಡೆ ಮಾಡಿ ವಾಸ್ತವವಾಗಿ ಗೂಂಡಾಗಿರಿ ತೋರಿದ ಹೆಬ್ಬಾಳ್ಕರ ರವರ ಹಾಗೂ ಹಟ್ಟಿಹೊಳಿಯವರ ಆಪ್ತ ಕಾರ್ಯದರ್ಶಿಗಳು ಮತ್ತು ಅವರ ಪಟಾಲಂ ನ್ನು ಬಂಧಿಸುವದಲ್ಲದೆ ಅವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕು .

ಈ ವಿಚಾರದಲ್ಲಿ ಗೌರವಾನ್ವಿತ ರಾಜ್ಯಪಾಲರು ಮಧ್ಯ ಪ್ರವೇಶಿಸಿ ರಾಜ್ಯ ಸರಕಾರಕ್ಕೆ ಸೂಕ್ತ ಸೂಚನೆ ನೀಡಬೇಕೆಂದು ಜಿಲ್ಲಾ ಅಧ್ಯಕ್ಷರಾದ ಶಾಂತಗೌಡ ಪಾಟೀಲರು , ಪತ್ರಿಕಾ ಪ್ರಕಟಣೆ ಮೂಲಕ ಕೋ–ರಿದ್ದಾರೆ.

# ಮೆಡಿಕಲ್ ಕಾಲೇಜಿನ ಡಾ. ಬಾಲಚಂದ್ರ ಅಂಕದ ಅವರ ಸಾಧನೆ

## ಅಂತರರಾಷ್ಟ್ರೀಯ ವೈದ್ಯಕೀಯ ಸಮ್ಮೇಳನದಲ್ಲಿ ವಿಶೇಷ ಉಪನ್ಯಾಸ




**ಬಾಗಲಕೋಟೆ :** ನಗರದ ಬಿ.ವಿ.ವಿ.ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ ಚರ್ಮರೋಗ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ.ಬಾಲಚಂದ್ರ ಅಂಕದ ಅವರು ಅಂತರರಾಷ್ಟ್ರೀಯ ವೈದ್ಯಕೀಯ ಸಮ್ಮೇಳನದಲ್ಲಿ ವಿಶೇಷ ಉಪನ್ಯಾಸ ನೀಡಿರುವರು. ಅರ್ಜೆಂಟಿನಾ ದೇಶದ ರಾಜಧಾನಿ ಬ್ಯೂನಸ್ ಐರಿಸ್ ನಗರದಲ್ಲಿ ಆಯೋಜಿಸಿದ್ದ ಡರ್ಮೊಸ್ಕೋಪಿಯ 6ನೇ ವರ್ಲ್ಡ್ ಕಾಂಗ್ರೆಸ್‌ನ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಉಪನ್ಯಾಸ ನೀಡಲು ಆಹ್ವಾನಿತರಾಗಿದ್ದರು.

ಸಮ್ಮೇಳನದಲ್ಲಿ ಡಾ.ಅಂಕದ ಅವರು ಚರ್ಮರೋಗಗಳ ಚಿಕಿತ್ಸೆ ಕುರಿತು ಎರಡು ವಿಶೇಷ ಉಪನ್ಯಾಸಗಳನ್ನು ನೀಡಿರುವರು. ಅಮೆರಿಕಾ, ಯುರೋಪ ಮತ್ತು ಏಷಿಯಾ ಭಾಗಗಳಿಂದ ಸುಮಾರು 1800 ವೈದ್ಯರು ಈ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಡಾ. ಅಂಕದ ಭಾರತದಿಂದ ಆಹ್ವಾನಿತರಾಗಿದ್ದ ಏಕೈಕ ಚರ್ಮರೋಗ ತಜ್ಞರೆಂಬುದು ವಿಶೇಷವಾಗಿತ್ತು. ಈಗಾಗಲೇ ಅವರು 10 ಕೂ ಹೆಚ್ಚು ಅಂತರರಾಷ್ಟ್ರೀಯ ವೈದ್ಯಕೀಯ ಸಮ್ಮೇಳನಗಳಲ್ಲಿ ಉಪನ್ಯಾಸ ನೀಡಿರುವರು. ಅನೇಕ ಸಂಶೋಧನಾ ಲೇಖನಗಳನ್ನು ಮತ್ತು ಪುಸ್ತಕಗಳನ್ನು ಪ್ರಕಟಿಸಿರುವರು. ಅವರ 160 ಕ್ಕೂ ಹೆಚ್ಚು ಸಂಶೋಧನಾ ಲೇಖನಗಳು ಪ್ರಕಟವಾಗಿವೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ನಿಯತಕಾಲಿಕೆಗಳಿಗೆ ವಿಮರ್ಶಕರಾಗಿ ಕಾರ್ಯನಿರ್ವಹಿಸುತ್ತಿರುವರು.

ಅಂತರರಾಷ್ಟ್ರೀಯ ವೈದ್ಯಕೀಯ ಸಮ್ಮೇಳನದಲ್ಲಿ ವಿಶೇಷ ಉಪನ್ಯಾಸ ನೀಡಿದ ಗೌರವಕ್ಕೆ ಭಾಜನರಾದ ಡಾ.ಬಾಲಚಂದ್ರ ಅಂಕದ ಅವರನ್ನು ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷಡಾ.ವೀರಣ್ಣಸಿ.ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಅಥ–'ಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ), ಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಡಾ.ಭುವನೇಶ್ವರಿ ಯಳಮಲಿ, ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ ಮತ್ತು ಎಲ್ಲ ವಿಭಾಗಗಳ ವೈದ್ಯರು ಮತ್ತು ಸಿಬ್ಬಂದಿ ಅಭಿನಂದಿಸಿರುವರು.

# ಅಕ್ಕಿಮರಡಿ ಪಿಕೆಪಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



**ಮಹಾಲಿಂಗಪುರ :** ಸಮೀಪದ ಅಕ್ಕಿಮರಡಿ ಗ್ರಾಮದ ಪಿಕೆಪಿಎಸ್ನ ನೂತನ ಅಧ್ಯಕ್ಷರಾಗಿ ಮಲ್ಲಪ್ಪ ಭೀರಪ್ಪ ಮಳಲಿ, ಉಪಾಧ್ಯಕ್ಷರಾಗಿ ಅಕ್ಷಯ ಶಿವಾನಂದ ಮಠದ ಅವಿರೋಧವಾಗಿ ಆಯ್ಕೆಯಾದರು.

ಶುಕ್ರವಾರ ನಡೆದ ಅಧ್ಯಕ್ಷ , ಉಪಾಧ್ಯಕ್ಷ ಚುನಾವಣೆಯಲ್ಲಿ ಉಭಯ ಸ್ಥಾನಗಳಿಗೆ ಒಂದೊಂದೇ ನಾಮಪತ್ರಗಳು ಸಲ್ಲಿಕೆಯಾಗಿದ್ದರಿಂದ ಅಕ್ಕಿಮರಡಿ ಪಿಕೆಪಿಎಸ್ ನೂತನ ಅಧ್ಯಕ್ಷರಾಗಿ ಮಲ್ಲಪ್ಪ ಭೀರಪ್ಪ ಮಳಲಿ, ಉಪಾಧ್ಯಕ್ಷ ಸ್ಥಾನಕ್ಕೆ ಅಕ್ಷಯ ಶಿವಾನಂದ ಮಠದ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ರಿಟರ್ನಿಂಗ್ ಆಫೀಸರ್ ಎಸ್. ಕೆ. ಸಾರವಾಡ ಘೋಷಿಸಿದರು.

ನೂತನ ಅಧ್ಯಕ್ಷ , ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ನೂತನ ನಿರ್ದೇಶಕರಾದ ಮಲ್ಲಪ್ಪ ಸಿದ್ದಪ್ಪ ಧೂಳಗೊಂಡ (ಜಗದಾಳ), ಯಶವಂತ ಕಾಂತಪ್ಪ ಚವ್ಹಾಣ, ಶ್ರೀಮಂತಗೌಡ ನಿಂಗನಗೌಡ ನ್ಯಾಮಗೌಡ್ರ, ಶ್ರೀಶೈಲ ಲಕ್ಷ್ಮಣ ಬಿರಾದಾರ ಪಾಟೀಲ, ಯಲ್ಲಪ್ಪ ಸಿದ್ದಪ್ಪ ಸೂರ್ಯವಂಶಿ,

ಪದ್ಮಾ ಬಸವರಾಜ ಬಿರಾದಾರ ಪಾಟೀಲ, ರೂಪಾ ತಮ್ಮಣ್ಣ ಡಂಗಿ, ಯಶವಂತ ಯಮನಪ್ಪ ಮೂಲಿಮನಿ, ಯಮನಪ್ಪ ನಿಂಗಪ್ಪ ನಾಯಿಕರ, ಪಾರ್ವತಿ ರಾಮಪ್ಪ ಮಂಟೂರ, ಸಂಘದ ಮುಖ್ಯ ಕಾರ್ಯನಿರ್ವಾಹಕ ಗೌಡಪ್ಪ ಹ. ಬಿರಾದಾರ ಪಾಟೀಲ ಸೇರಿದಂತೆ ಹಲವರು ಭಾಗವಹಿಸಿದ್ದರು.



ಬಾಲಭಾರತಿ ಪಬ್ಲಿಕ್ ಶಾಲೆ ಕೂಡಗಿ ಇಲ್ಲಿ ನಡೆದ ಅಃಖಇ ಶಾಲೆಗಳ ಅಂತರ್ ವಲಯಗಳ ಕ್ರೀಡಾಕೂಟದಲ್ಲಿ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ಜಯಶಾಲಿಗಳಾದ ಬಾಗಲಕೋಟೆಯ ಬೇವಿನಮಟ್ಟಿ ಸಮೀಪದ ಶ್ರೀ ರಂಗನಾಥ ಅಂತರಾಷ್ಟ್ರೀಯ ಶಾಲೆಯ ಮಕ್ಕಳೊಂದಿಗೆ ಪ್ರಾಚಾರ್ಯ ವಿಕ್ರಮ್ ನಾರ್ವೇಕರ್, ದೈಹಿಕ ಶಿಕ್ಷಕ ಪ್ರಕಾಶ ವೆಂಕಣ್ಣವರ ಹಾಗೂ ಶಿಕ್ಷಕರು.

## ತೇರದಾಳದಲ್ಲಿ ಸಿದ್ಧೇಶ್ವರ ಉತ್ಸವ

# ಸದೃಢವಾದ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು: ಆನಂದ ಶ್ರೀ

**ತೇರದಾಳ :** ದೇಶದಲ್ಲಿ ಸದೃಢವಾದ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಬಹಳಷ್ಟು ಮಹತ್ವದ್ದಾಗಿದೆ. ಒಬ್ಬ ವ್ಯಕ್ತಿಯ ಬದುಕು ಸುಂದರವಾಗಬೇಕಾದರೆ ಶಿಕ್ಷಕರು ಬಣ್ಣ ಹಚ್ಚಿದಾಗ ಮಾತ್ರ ಸುಂದರಗೊಳ್ಳುತ್ತದೆ ಎಂದು ಜಮಖಂಡಿ ಓಲೇಮಠದ ಆನಂದ ಶ್ರೀ ಹೇಳಿದರು.

ಇಲ್ಲಿನ ಸಿದ್ಧೇಶ್ವರ ವಿದ್ಯಾವರ್ಧಕ ಸಂಘದ ಸರ್. ಎಂ. ವಿಶ್ವೇಶ್ವರಯ್ಯ ಪದವಿ ಪೂರ್ವ ವಿಜ್ಞಾನ ಕಾಲೇಜ್ ಹಾಗೂ ಸ್ವಾಮಿ ವಿವೇಕಾನಂದ ಇಂಟರ್ನ್ಯಾಷನಲ್ ಪಬ್ಲಿಕ್ ಸ್ಕೂಲ್ನಲ್ಲಿ ಹಮ್ಮಿಕೊಂಡಿದ್ದ ಸಿದ್ಧೇಶ್ವರ ಉತ್ಸವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.




ಮಕ್ಕಳಿಗೆ ಶಿಕ್ಷಣದ ಜತೆಗೆ ಸಂಸ್ಕಾರ ನೀಡುವುದು ಬಹಳಷ್ಟು ಅವಶ್ಯಕ ಇದೆ. ಆ ನಿಟ್ಟಿನಲ್ಲಿ ಸಂಸ್ಥೆಯವರು ವಿದ್ಯಾರ್ಥಿಗಳಲ್ಲಿ ತುಂಬಿರುವ ಸಂಸ್ಕಾರ ಶ್ಲಾಘನೀಯ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬನಹಟ್ಟಿ ಎಸ್ಸಿಸಿ ಕಾಲೇಜಿನ ನಿವೃತ್ತ ಉಪನ್ಯಾಸಕ ಡಾ. ಸಂಗಮೇಶ ಮಟೋಳಿ, ಜಾಗತಿಕ ಮಟ್ಟದಲ್ಲಿ ಇಂದು ಶಿಕ್ಷಣ ತನ್ನದೆಯಾದ ಸದ್ದು ಮಾಡುತ್ತಿದೆ. ಶಿಕ್ಷಣ ಬದುಕಿನ ಸಂಜೀವಿನಿಯಾಗಿದೆ. ಪಾಲಕರು ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ನೀಡುವುದರ ಜತೆಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಬೇಕೆಂದು ಹೇಳಿದರು. ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ ಮಾತನಾಡಿದರು. ಸಿಬಿಎಸ್ಇ ಚೇರಮನ್ ಶಂಕರ ಮಂಗಸೂಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆ ಅಧ್ಯಕ್ಷ ಡಾ. ಶಂಕರ ಅಥಣಿ ಅಧ್ಯಕ್ಷತೆ ವಹಿಸಿದ್ದರು. ಚೇರಮನ್ ಮಹೇಶ ಯಾದವಾಡ, ಪ್ರವೀಣ ನಾಡಗೌಡ, ಸಿಆರ್ಸಿ ಅನಂತ ಮುಧೋಳ, ರಮೇಶ ಅವರಾದಿ, ಮಲ್ಲಪ್ಪ ಮುಕರಿ, ರವಿ ಅವರಾದಿ, ಬಸವರಾಜ ಬಾಳಿಕಾಯಿ, ಶಿವಾನಂದ ನಿವರಗಿ, ಪರಪ್ಪ ಕಾಲತಿಪ್ಪಿ, ಪರಪ್ಪ ಅಥಣಿ, ಆಡಳಿತಾಧಿಕಾರಿ ಎಂ. ಬಿ. ಮಾಳೇದ, ಪ್ರಾಚಾರ್ಯ ಜಾಯ್ ಸಿಬಸ್ಟ್ನ ಹಾಜರಿದ್ದರು.

# ದಲಿತರೂ ಲಿಂಗಾಯತರೆಂದು ಹೆಮ್ಮೆಯಿಂದ ಹೇಳಿಕೊಳ್ಳಲಿ: ಪತ್ರಕರ್ತ ಸಿದ್ದಣ್ಣವರ

**ಗುಳೇದಗುಡ್ಡ :** ದಲಿತರು ಕೂಡ ತಾವು ಲಿಂಗಾಯತರೆಂದು ಅಭಿಮಾನ ಮತ್ತು ಹೆಮ್ಮೆಯಿಂದ ಹೇಳಿಕೊಳ್ಳಬೇಕು. ಹನ್ನೆರಡನೇ ಶತಮಾನದಲ್ಲಿ ಅಂದಿನ ಸಮಾಜದಲ್ಲಿ ಬೇರೂರಿದ್ದ ಮನುಷ್ಯ- ಮನುಷ್ಯರ ಮಧ್ಯದ ತಾರತಮ್ಯ, ಶ್ರೇಷ್ಠ – ಕನಿಷ್ಠ , ಮೇಲರಿಮೆ – ಕೀಳರಿಮೆ ಗೋಳನ್ನು ತೊಡೆದು ಹಾಕಲು ಬಸವಣ್ಣನವರು ಕೆಳ ಸಮುದಾಯದ ಜನರಿಗೆ ಲಿಂಗದೀಕ್ಷೆ ನೀಡಿ ಲಿಂಗಾಯತರನ್ನಾಗಿ ಮಾಡಿದ್ದಾರೆ. ಹಾಗಾಗಿ ನಾವು ಶರಣ ಧರ್ಮದ ಲಿಂಗಾಯತರು ಎಂದು ಅಭಿಮಾನದಿಂದ ಹೇಳಬೇಕಾಗಿದೆ ಎಂದು ಹಿರಿಯ ಪತ್ರಕರ್ತ ಮಲ್ಲಿಕಾರ್ಜುನ ಸಿದ್ದಣ್ಣವರ ದಲಿತರಿಗೆ ಕರೆ ನೀಡಿದರು.



ಇಲ್ಲಿನ ಪಟ್ಟಸಾಲಿ ನೇಕಾರ ಗುರುಪೀಠದಲ್ಲಿ ಆಯೋಜಿಸಿದ್ದ ಶರಣ ಸಂಗಮ ಸಮಾರಂಭ, ಪಟ್ಟಾಭಿಷೇಕ ಮಹೋತ್ಸವ ಮತ್ತು ಶರಣ ಮಾದಾರ ಚನ್ನಯ್ಯ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಬಸವಣ್ಣನವರು ಕೆಳ ವರ್ಗದ, ಅದರಲ್ಲೂ ದುಡಿಯುವ ವರ್ಗದ ಜನತೆಯಲ್ಲಿನ ಕೀಳರಿಮೆ ತೊಲಗಿಸಲು ಮತ್ತು ಬೇರೆಯವರಿಂದ ಅವರಿಗೆ ಆಗುತ್ತಿರುವ ಶೋಷಣೆ ತಪ್ಪಿಲು ಅವರಿಗೆಲ್ಲ ಇಷ್ಟಲಿಂಗ ನೀಡಿದರು. ಹಾಗಾಗಿ ಇಂದಿನ ಲಿಂಗಾಯತರಲ್ಲಿ ಬಹುತೇಕರು ಅಂದು ಶೋಷಿತ ವರ್ಗಗಳಿಗೆ ಸೇರಿದವರಾಗಿದ್ದಾರೆ. ಇಂದು ದಲಿತರು- ಲಿಂಗಾಯತರು ಬೇಧ ಮರೆತು ಒಂದಾದರೆ ಹೊಸ ಇತಿಹಾಸ ಸೃಷ್ಟಿಯಾಗಲಿದೆ ಎಂದರು.

ಸಾಮಾಜಿಕವಾಗಿ, ಆರ್ಥಿಕವಾಗಿ ದಲಿತರು ಬದುಕಿನಲ್ಲಿ ಬದಲಾವಣೆ ಆಗಲು ಸಂವಿಧಾನ ಬದ್ಧ ಮೀಸಲಾತಿ ಸೌಲಭ್ಯವನ್ನು ಪಡೆಯಲಿ. ಆದರೆ, ಶರಣ ಕ್ರಾಂತಿಯ ಆಶಯ ನನಸು ಮಾಡಲು, ಸಮಾಜ ನಿರ್ಮಾಣಕ್ಕೆ ದಲಿತರು ಲಿಂಗಾಯಿತರು ಆಗುವುದು ಅತ್ಯಗತ್ಯವಾಗಿದೆ ಎಂದು ಸಿದ್ದಣ್ಣವರ ದಲಿತರಿಗೆ ಕಿವಿಮಾತು ಹೇಳಿದರು

ಕೊಲ್ಹಾಪುರ ಕಣೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಗಳು ಮಾತನಾಡಿದರು. ಶ್ರೀ ಬಸವರಾಜ ಪಟ್ಟದಾರ್ಯ ಶ್ರೀಗಳು, ನಿಯೋಜಿತ ಪೀಠಾಧಿಕಾರಿ ಗುರುಬಸವ ದೇವರು, ಬಾಲ್ಕಿಯ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದೇವರು, ಮೈದರಂಗಿಯ ಮೃತ್ಯುಂಜಯ ಸ್ವಾಮಿಗಳು, ಗುರುಪಾದ ಶಿವಾಚಾರ್ಯ ಶ್ರೀಗಳು, ರುದ್ರಾಕ್ಷಿಮಠದ ಅಲ್ಲಮಪ್ರಭು ಸ್ವಾಮಿಗಳು ಮಾತನಾಡಿದರು.

ಸಸ್ತಾಪೂರದ ಡಾ.ಈಶ್ವರಾನಂದ ಶ್ರೀಗಳು ಅಧ್ಯಕ್ಷತೆ ವಹಿಸಿದ್ದರು. ಹಂಸನೂರು ಶಿವಾನಂದ ಮಠದ ಬಸವರಾಜೇಂದ್ರ ಶ್ರೀಗಳು, ಟೆಂಗಿನಮಠದ ಮಲ್ಲಿಕಾರ್ಜುನ ದೇವರು, ಶಾಸಕ ಭೀಮಸೇನ ಚಿಮ್ಮನಕಟ್ಟಿ, ಮಾಜಿ ಶಾಸಕ ಎಸ್.ಜಿ.ನಂಜಯ್ಯನಮಠ, ಜೆಡಿ-ಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಮಾದಿಗ ಸಮಾಜದ ರಾಜ್ಯಾಧ್ಯಕ್ಷ ಶಂಕರ ಪೂಜಾರಿ ರಾಜು ಜವಳಿ, ನಾಗೇಶಪ್ಪ ಪಾಗಿ ಇತರರು ಇದ್ದರು.

## ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ



**ಮುಧೋಳ :** ತಾಲೂಕಿನ ಮುಗಳಖೋಡಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಎಸ್. ಎಸ್.ಎಲ್.ಸಿ. ಮತ್ತು ದ್ವಿತೀಯ ಪಿಯುಸಿವಿದ್ಯಾರ್ಥಿಗಳುವಾರ್ಷಿಕ ಪರೀಕ್ಷೆಯಲ್ಲಿ ತಾಲೂಕಿಗೆ ಪ್ರಥಮ, ದ್ವಿತೀಯ, ಹಾಗೂ ತೃತೀಯ ಸ್ಥಾನ ಪಡೆದು ಉತ್ತಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಗ್ರಾಮ ಪಂಚಾಯಿತಿಯಿಂದಹತ್ತುಸಾವಿರ ರೂಪಾಯಿನಗದುಗೌರವಧನವನ್ನು ನೀಡಿ ಸನ್ಮಾನಿಸಲಾಗುವುದೆಂದು ಮುಗಳಖೋಡ ಗ್ರಾಮದ ಪಂಚಾಯ್ತಿ ಅಧ್ಯಕ್ಷೆ ಶ್ರೀಮತಿ ಮಹಾದೇವಿಮರೆಗುದ್ದಿಹೇಳಿದರು. ಅವರು ಇಂದು ಪತ್ರಿಕೆಯೊಂದಿಗೆ ಮಾತನಾಡಿ ಈಗಾಗಲೇ ಗ್ರಾಮ ಪಂಚಾಯ್ತಿಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಚಚಿ9ಸಿ ಸರ್ವ ಸದಸ್ಯರ ಸಹಮತದಿಂದ ಸರ್ವಾನುಮತದಿಂದ ನಿರ್ಣಯ ವನ್ನು ಮಾಡಲಾಗಿದೆ ಎಂದು ಹೇಳಿದರು.

# ಉಚಿತ ನೇತ್ರ ತಪಾಸಣಾ ಶಿಬಿರ ಯಶಸ್ವಿ

**ಕೊಪ್ಪಳ :** ನಗರದ ಸರ್ದಾರಗಲ್ಲಿಯಲ್ಲಿ ಎಂ.ಎಂ.ಜೋಶಿ ಕಣ್ಣಿನ ಆಸ್ಪತ್ರೆಯ ಖ್ಯಾತ ವೈದ್ಯರಿಂದ ಅಲ್ಫಾ ಹೆಲ್ತ್ ಎಜುಕೇಷನ್ ಅಂಡ್ ರೂರಲ್ ಡೆವೆಲೆಪ್‌ಮೆಂಟ್ ಫೌಂಡೇಷನ್, ಮಹಿಳಾ ಧ್ವನಿ ಶಿಕ್ಷಣ ಮತ್ತು ಗ್ರಾಮೀಣ ಕ್ಷೇಮಾಭಿವೃದ್ಧಿ ಸಂಘ ಕೊಪ್ಪಳ ಹಾಗೂ ಕರ್ನಾಟಕ ರಾಜ್ಯ ನದಾಫ್/ಪಿಂಜಾರ ಸಂಘ ಕೊಪ್ಪಳ ತಾಲೂಕ (ಗ್ರಾ) ಘಟಕದ ಸಹಯೋಗದಲ್ಲಿ ಉಚಿತ ನೇತ್ರ ತಪಾಸಣಾ ಶಿಬಿರ ಹಾಗೂ ಕನ್ನಡಕ ವಿತರಣೆ ಕಾರ್ಯಕ್ರಮ ಇಂದು ದಿನಾಂಕ 21-12-24 ರಂದು ಬೆಳಗ್ಗೆ 10:30 ಕ್ಕೆ ಯಶಸ್ವಿಯಾಗಿ ಜರುಗಿತು.




ರಾಜ್ಯ ನದಾಫ್ ಪಿಂಜಾರ ಸಂಘದ ರಾಜ್ಯ ಕೋಶಾಧಿಕಾರಿ ಹಾಗೂ ಕೊಪ್ಪಳ ನಗರಸಭೆ ಮಾಜಿ ಸದಸ್ಯ ಶಹಾಬುದ್ದೀನ್ ಸಾಬ್ ಇವರು ಸಸಿಗೆ ನೀರು ಹಾಕುವುದರ ಮೂಲಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಸಂಘದ ಕೊಪ್ಪಳ ಜಿಲ್ಲಾ ಅಧ್ಯಕ್ಷರಾದ ಕಾಸಿಂ ಅಲಿ ಮುದ್ದಾಬಳ್ಳಿ, ತಾಲೂಕು ಅಧ್ಯಕ್ಷರಾದ ಅಸ್ಮಾನ ಸಾಬ್ ಕರ್ಕಿ ಹಳ್ಳಿ, ಆಲ್ಫಾ ಫೌಂಡೇಶನ್ ಹಾಗೂ ನದಾಫ್ ಜಿಲ್ಲಾ ಸಂಘದ ಮಹಿಳಾ ಜಿಲ್ಲಾ ಅಧ್ಯಕ್ಷರಾ ಸಲಿಮಾಜಾನ್, ಮಹಿಳಾ ಧ್ವನಿ ಕ್ಷೇಮಾಭಿವೃದ್ಧಿ ಅಧ್ಯಕ್ಷರಾದ ಪ್ರಿಯದರ್ಶಿನಿ, ಶಿಫಾ ಕ್ಲಿನಿಕ್ ಡಾ. ಎಸ್ ಕೆ ರಾಜೂರ, ಜೋಶಿ ಆಸ್ಪತ್ರೆ ವ್ಯವಸ್ಥಾಪಕ ಬಸಯ್ಯ ಹಿರೇಮಠ, ಪಂಚಕಮಿಟಿ ಅಧ್ಯಕ್ಷರಾದ ಖಾದರ್ ಸಾಬ್ ಕುದ್ರಿಮೋತಿ, ನಗರಸಭೆ ಮಾಜಿ ಸದಸ್ಯರಾದ ಮಾನ್ವಿ ಪಾಷಾಸಾಬ್ ಉಪಾಧ್ಯಕ್ಷರಾದ ಫಕ್ರುಸಾಬ್ ನದಾಫ್ , ಮೀರಾಸಾಬ ಬನ್ನಿಗೋಳ, ಮುರ್ತುಜಾಸಾಬ ಚುಟ್ಟದ, ಕಾರ್ಯದರ್ಶಿ ಮುಸ್ತಫಾ ಕುದ್ರಿಮೋತಿ, ಖಜಾಂಚಿ ಮರ್ದಾನಸಾಬ್ ಲುಂಗಿ, ರಶೀದ್ ನೀರಲಗಿ, ಹಸನ್ ಸಾಬ್ ಮಂಗಳಾಪೂರ, ಪೀರಸಾಬ್ ಭೈರಾಪುರ, ರಿಯಾಜ್ ಕುದ್ರಿಮೋತಿ, ಮುಮ್ತಾಜ್ ಬೇಗಂ ರೋಣ, ಸಿರಾಜ್ ಕೋಲ್ಕಾರ್, ನಗರಸಭೆ ಮಾಜಿ ಸದಸ್ಯ ಖಾಜಾವಲಿ ಬನ್ನಿಕೊಪ್ಪ, ಗೌಸಾಬ್ ಸರ್ದಾರ್, ರಮ್ಜಾನ್ ಸಾಬ್ ಕಂಬಳಿ, ಶಾಕಿರ್, ರಾಜಾಬಕ್ಷಿ, ಬಡೇಸಾಬ್ ಪಾಲ್ಗೊಂಡಿದ್ದರು.

ಕೊಪ್ಪಳ ನಗರದ ಸರ್ದಾರಗಲ್ಲಿಯ ಸಾಲಾರಜಂಗ್ ರೋಡಿನಲ್ಲಿರುವ ಶಿಫಾ ಕ್ಲಿನಿಕ್ (ಡಾ॥ ಎಸ್ ಕೆ ರಾಜೂರ ಆಸ್ಪತ್ರೆ) ಯಲ್ಲಿ ಕೊಪ್ಪಳ ಹಾಗೂ ಇತರ ತಾಲೂಕಿನ ಗ್ರಾಮೀಣ ಹಾಗೂ ನಗರದ ಹಿಂದುಳಿದ ಪ್ರದೇಶದ ಬಡ ಜನರ ಆರೋಗ್ಯದ ಹಿತದೃಷ್ಟಿಯಿಂದ 'ಉಚಿತ ನೇತ್ರ ತಪಾಸಣಾ ಶಿಬಿರ' ಹಾಗೂ 'ಉಚಿತ ಕನ್ನಡಕ' (8 ದಿನಗಳ ನಂತರ ಅರ್ಹ ಕಡು ಬಡವರಿಗೆ ಮಾತ್ರ) ವಿತರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಪ್ರತಿಯೊಬ್ಬ ಮನುಷ್ಯನಿಗೆ ಆರೋಗ್ಯ ಬಹಳ ಮುಖ್ಯ. ಕಣ್ಣಿದ್ದರೆ ಮಾತ್ರ ಎಲ್ಲವನ್ನು ನೋಡಿ ಅನುಭವಿಸಬಹುದು. ಆದಕಾರಣ ಕಣ್ಣಿನ ಆರೈಕೆಗೆ ಬಹಳ ಮಹತ್ವ ನೀಡುವುದರ ಮೂಲಕ ಈ ಉಚಿತ ಶಿಬಿರದಲ್ಲಿ ಸದುಪಯೋಗ ಪಡಿಸಿಕೊಳ್ಳಲು ನೋಂದಣಿ ಮಾಡಿದ ಸುಮಾರು 200 ಕ್ಕೂ ಹೆಚ್ಚು ಫಲಾನುಭವಿಗಳನ್ನು ತಪಾಸಣೆ ಮಾಡಲಾಯಿತು.

ನಿರೂಪಣೆಯನ್ನು ಬಾಬು ಎಂಕರ್ ರವರು ಮಾಡಿದರು.

# ಉಡುಪಿ ಪೇಜಾವರ ಶ್ರೀ ವಿಶ್ವ ತೀರ್ಥ ಪ್ರಸನ್ನ ಮಹಾಸ್ವಾಮಿಜೀಗಳ ದರ್ಶನ ಪಡೆದ ನಬಿ ಅನಗವಾಡಿ



**ಉಡುಪಿ :** ನಾಡಿನ ಉಡುಪಿ ಜಿಲ್ಲಾ ನಗರದ ಪ್ರಸಿದ್ಧ ಸಾಮರಸ್ಯ ಸಾರುವ ಅತ್ಯಂತ ಯಶಸ್ವಿಯಾಗಿ ಸಾಮಾಜಿಕ ಕಾರ್ಯ ಮಾಡುತ್ತಿರುವ ಶ್ರೀ ಪೇಜಾವರ ಶ್ರೀ ಮಠದ ವಿಶ್ವೇಶತೀರ್ಥ ಶ್ರೀಪಾದರು ಅಯೋಧ್ಯ ರಾಮ ಮಂದಿರ ಮುಖ್ಯ ಅರ್ಚಕರು ಹಾಗೂ ಸಮಿತಿ ಸದಸ್ಯರು ಅವರನ್ನು ಇಂದು ಭೇಟಿ ಮಾಡಿ ಅಭಿನಂದಿಸಿದ ಸಂದರ್ಭ

ಈ ಸಂದರ್ಭದಲ್ಲಿ ಶ್ರೀಪಾದರು ನನ್ನ ಸಾಮಾಜಿಕ ಹಾಗೂ ರಾಜಕೀಯ ಸೇವೆಯನು ಗೌರವಿಸಿ ಅನಗವಾಡಿ ನಬಿ ನದಾಫ್ ತಮ್ಮ ಕಾರ್ಯ ನಿಜಕ್ಕೂ ಅಭಿನಂದನೀಯವಾಗಿದೆ

ಹೀಗೆ ಮುಂದುವರಿಯಲಿ ನಿಮ್ಮ ಜೀವನ ಯಶಸ್ವಿಯಾಗಲಿ ಎಂದು ಶುಭ ಹಾರೈಸಿ ಆಶೀರ್ವಾದ ಮಾಡಿದರು ಈ ಸಂದರ್ಭದಲ್ಲಿ ಕಿರಣ್ ಸಲ್ಲಿಂ ಮುಂಬಾಗಿಲು ಉಡುಪಿ ಗಣೇಶ ಉಪಸ್ಥಿತರಿದ್ದರು.

# ಪರಮಾತ್ಮನಿಗಿಂತ ಗುರು ಶ್ರೇಷ್ಠ: ಸಿದ್ದರಾಮ ಶ್ರೀಗಳು

**ಗುಳೇದಗುಡ್ಡ :** ಪರಮಾತ್ಮನಿಗಿಂತ ಗುರು ಶ್ರೇಷ್ಠ. ಈ ಲೋಕದಲ್ಲಿ ಗುರುವಿನ ಸ್ಥಾನ ಅತ್ಯಂತ ಮಹತ್ವದ್ದಾಗಿದೆ. ಗುರುವಿನ ಮೂಲಕವೇ ಎಲ್ಲವೂ ನಡೆಯುತ್ತದೆ. ಗುರುವಿನ ಮಾರ್ಗದರ್ಶ ಮಾಡದಿದ್ದರೆ, ಅರಿವು ತುಂಬದಿದ್ದರೆ, ಜ್ಞಾನ ನೀಡದಿದ್ದರೆ ಮನುಷ್ಯ ಈ ಜೀವನದಲ್ಲಿ ಏನನ್ನು ಸಾಧನೆ ಮಾಡಲು ಸಾಧ್ಯವಿಲ್ಲ. ದೇವರ ಸ್ವರೂಪ ತಿಳಿಸಿಕೊಟ್ಟ ಗುರು ನಮಗೆ ಶ್ರೇಷ್ಠವೆಂದು ಗದಗ ತೋಂಟದಾರ್ಯ ಸಂಸ್ಥಾನಮಠದ ಡಾ.ಜಗದ್ಗುರು ತೋಂಟದ ಸಿದ್ದರಾಮ ಶ್ರೀಗಳು ಹೇಳಿದರು.




ಅವರು ಪಟ್ಟಣದ ಶ್ರೀ ಜಗದ್ಗುರು ಗುರುಸಿದ್ದೇಶ್ವರ ಬ್ರಹನ್ಮಠದಲ್ಲಿ ಶ್ರೀ ಗುರುಸಿದ್ದ ಪಟ್ಟದಾರ್ಯ ಮಹಾಸ್ವಾಮಿಗಳ 39ನೇ ವಾರ್ಷಿಕ ಪುಣ್ಯಾರಾಧನೆಯಣ ಸಂಗಮ, ಗುರುಬಸವ ದೇವರಪಟ್ಟಾಭಿಷೇಕ ಮಹೋತ್ಸವದ ವಿಶೇಷ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮನುಷ್ಯ ದೇವರನ್ನು ಅರಿತುಕೊಳ್ಳಲು, ಅನುಗ್ರಹ, ಆಶೀರ್ವಾದ, ಒಲುಮೆ ಪಡೆಯಬೇಕಾದರೆ ನಾವು ಮೊದಲು ನಾವು ಗುರುವನ್ನು ಆಶ್ರಯಿಸಬೇಕು. ಗುರುವಿನ ಸೇವೆ ಮಾಡಬೇಕು. ಅಂದಾಗ ಮಾತ್ರ ಪರಮಾತ್ಮನ ಒಲುಮೆಗೆ ಪಾತ್ರರಾಗುತ್ತೇವೆ ಎಂದರು.

ಸಿದ್ಧಸಂಸ್ಥಾನಮಠದ ಜಗದ್ಗುರು ಪಂಚಮಶಿವಲಿಂಗೇಶ್ವರ ಶ್ರೀಗಳು ಸಾನಿಧ್ಯ ವಹಿಸಿ ಮಾತನಾಡಿ, ಭಕ್ತರ ತ್ಯಾಗಬಲದಿಂದ ಮಠಗಳಲ್ಲಿ ಶಿಕ್ಷಣ ಸಂಸ್ಥೆಗಳು ಬೆಳೆಯುತ್ತಿವೆ.

ಮಠದ ಪ್ರಭಾವದಿಂದ ಮಾನವ ದೈವತ್ವ ಪಡೆಯುತ್ತಾನೆ.

ಜನರಲ್ಲಿನ ಅಜ್ಞಾನ, ಅಂಧಕಾರ, ಮೂಢನಂಬಿಕೆ ತೆಗೆದು ಅವರಲ್ಲಿ ಧಾರ್ಮಿಕ ಮನೋಭಾವನೆ ಮೂಡಿಸುವ ಕೆಲಸ ಶ್ರೀಮಠ ಕಳೆದ 40 ವರ್ಷಗಳಿಂದ ಬಹಳಷ್ಟು

ಅರ್ಥಪೂರ್ಣವಾಗಿ ಮಾಡುತ್ತಿರುವುದು ಶ್ಲಾಘನೀಯವೆಂದರು.

ಯುವ ವಿಜ್ಞಾನಿ ಅಭಿಷೇಕ ತಿಪ್ಪಾ, ಕುಮಾರೇಶ್ವರ ಸಹಕಾರಿ ಸಂಘದ ಅಧ್ಯಕ್ಷ ಎಂ.ಬಿ.ಹಂಗರಗಿ, ಸಾಹಿತಿ ಡಾ.ಸಂಗಮನಾಥ ಲೋಕಾಪೂರ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀಜಗದ್ಗುರು ಬಸವರಾಜ ಪಟ್ಟದಾರ್ಯ ಶ್ರೀಗಳು, ಗುರುಬಸವ ದೇವರು, ಸಂಜಯ ಬರಗುಂಡಿ, ಸಂಗನಬಸಪ್ಪ ತಿಪ್ಪಾ, ಚಂದ್ರಶೇಖರ ಹೆಗಡೆ ಇತರರು ಇದ್ದರು.

ಇದೇ ಸಂದರ್ಭದಲ್ಲಿ ನಿಡಸೋಸಿ ಸಿದ್ಧಸಂಸ್ಥಾನಮಠದ ಶ್ರೀಗಳು ಬಸವರಾಜ ಶ್ರೀಗಳಿಗೆ ಹಾಗೂ ಗುರುಬಸವ ದೇವರಿಗೆ ಚಿನ್ನದ ಉಂಗುರು ತೊಡಿಸಿ ಸನ್ಮಾನಿಸಿದರು.

# ನಿಂಗಪ್ಪ ಸುದ್ದಿ ವಕೀಲರಿಗೆ ಬಸವ ಕಾಯಕ ಪ್ರಶಸ್ತಿ ಗೌರವ



**ಗಂಗಾವತಿ :** ಸದ್ದಿಲ್ಲದ ವಕೀಲ ವೃತ್ತಿ ಹಾಗು ರಂಗಭೂಮಿ ಚಲನಚಿತ್ರಗಳಲ್ಲಿ ಹೆಸರು ಮಾಡುತ್ತಿರುವ ಸಜ್ಜನ ವ್ಯಕ್ತಿತ್ವದ ನಿಂಗಪ್ಪ ಸುದ್ದಿ ವಕೀಲರಿಗೆ ಶ್ರೀ ಜಗದ್ಗುರು ಅನ್ನದಾನೀಶ್ವರ ಮುಂಡರಗಿ ಶಾಖಾ ಮಠ ತಳಕಲ್‌ನ ಶ್ರೀ ಮ.ನಿ.ಪ್ರ. ಡಾ. ಮಹಾದೇವ ಮಾಹಾಸ್ವಾಮಿಗಳು ಸುಕ್ಷೇತ್ರದ ಜಾತ್ರಾಮಹೋತ್ಸವದ ವೇಳೆ 'ಬಸವ ಕಾಯಕ-2024' ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ಶರಣ ಪರಂಪರೆಯ ಅನೇಕ ನಾಟಕಗಳು ಸೇರಿದಂತೆ ಸಾಮಾಜಿಕ ಕಳಕಳಿಯ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದರು. ಇತ್ತೀಚಿಗೆ ಮುಂಡರಗಿಯ ಶ್ರೀ ಅನ್ನದಾನೀಶ್ವರ ಮಹಾತ್ಮೆ ಚಿತ್ರದಲ್ಲೂ ಅಭಿನಯಿಸುತ್ತಿದ್ದಾರೆ. ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು ಮೈನಳ್ಳಿ, ಶ್ರೀ ಚಿದಾನಂದ ಮಹಾಸ್ವಾಮಿಗಳು, ಶ್ರೀ ಶಿವಯೋಗಿ ಶ್ರೀಗಳು ಸರಟೂರು ಮುಂತಾದ ಶ್ರೀಗಳು ಸೇರಿದಂತೆ ಕುಮಾರ ಶಾಸ್ತ್ರಿ ಹಿರೇಮಠ, ಸಂಗಮೇಶ್ ಕಲ್ಮಠ, ಎಂ.ಮುದಿಯಪ್ಪ, ಮಲ್ಲಪ್ಪ ಬಂಗಾರಿ, ಮಲ್ಲಪ್ಪ ಹಾಗು ಬಸವರಾಜ್ ಇತರರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State